28 June 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 210 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3


**ಭಾವನಾಂತರಂಗ**

ವ್ಯಕ್ತಿಯ ವ್ಯಕ್ತಿತ್ವ ಗಡಿಯಾರದಲ್ಲಿಯ ಸಂಖ್ಯೆ ಆಗಬೇಕೇ ವಿನಃ ಕಾಲಕ್ಕೆ ತಕ್ಕಂತೆ ಬದಲಾಗುವ ಮುಳ್ಳಾಗಬಾರದು!

-ಸ್ನೇಹಾ ಆನಂದ್



ಸರ್ವಜನಾಂಗದ ಶಾಂತಿ ತೋಟ ಕಂಡಿದ್ದ ಕೆಂಪೇಗೌಡರು — ಪುಟ ಸಂ. 2


ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ: ಸೂಕ್ತ ತನಿಖೆಗೆ ಒತ್ತಾಯ — ಪುಟ ಸಂ. 3


ಕೆರೆ ತುಂಬಿಸಲು ಶಾಸಕರು ವಿಫಲ: ಮಾಜಿ ಶಾಸಕ ನಿರಂಜನಕುಮಾರ್ — ಪುಟ ಸಂ. 4


# ಕಾರು ಸ್ಫೋಟಿಸಿಕೊಂಡು 'ಪಾಗಲ್ ಪ್ರೇಮಿ' ಸಜೀವ ದಹನ

## ಪ್ರಿಯತಮೆಗೆ ಚಾಕು ಇರಿದು ಕೊಲೆಗೆ ಯತ್ನ । ಸಿನಿಮಿಯಾ ರೀತಿ ಘಟನೆ

**ತುಮಕೂರು:** ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಕಾರಿನಲ್ಲೇ ಭಗ್ನ ಪ್ರೇಮಿಯೊಬ್ಬ ಯುವತಿಗೆ ಚಾಕು ಇರಿದಿದ್ದಾನೆ. ಅಲ್ಲದೆ, ಕಾರಿನಲ್ಲಿ ಪೆಟ್ರೋಲ್ ಬಾಂಬ್ ಸಿಡಿಸಿ ಸಜೀವ ದಹನ ಆಗಿದ್ದಾನೆ. ಸಿನಿಮಿಯಾ ರೀತಿ ಘಟನೆ ನಡೆದಿದೆ.

ತುಮಕೂರು ಸಮೀಪದ ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿಯ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿ ಶನಿವಾರ ಈ ಭೀಕರ ಘಟನೆ ಸಂಭವಿಸಿದೆ. ಚಲಿಸುತ್ತಿದ್ದ ಕಾರಿನೊಳಗೆ ಯುವಕನೊಬ್ಬ ಯುವತಿಗೆ ಚಾಕುವಿನಿಂದ ಇರಿದು, ಬಳಿಕ ಕಾರಿನ ಎಲ್ಲಾ ಡೋರ್‌ಗಳನ್ನು ಲಾಕ್ ಮಾಡಿ ಪೆಟ್ರೋಲ್ ಬಾಂಬ್ ಸಿಡಿಸಿಕೊಂಡು ಸಜೀವ ದಹನ ಆಗಿದ್ದಾನೆ. ಮೃತನನ್ನು ಬೆಂಗಳೂರಿನ ನಾಗೇಂದ್ರ (30) ಎಂದು ಗುರುತಿಸಲಾಗಿದೆ. ತೀವ್ರ ಗಾಯಗಳೊಂದಿಗೆ ಪ್ರಾಣಾಪಾ ಯದಿಂದ ಪಾರಾಗಿರುವ ಯುವತಿ ರಮ್ಯಾ ಉಲ್ಲಾಸ್ (23) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಎಸ್ಪಿ ಅಶೋಕ್ ತನಿಖೆಗೆ ಸೂಚಿ ಸಿದ್ದಾರೆ. ಕಳ್ಳಂಬೆಳ್ಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಸುಟ್ಟು ಕರಕಲಾದ ಕಾರನ್ನು ವಶಕ್ಕೆ ಪಡೆದಿದ್ದಾರೆ.



### ಭೀಕರ ಘಟನೆ ನಡೆದದ್ದು ಹೇಗೆ?

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅಗಸೂರು ಗ್ರಾಮದ ನಿವಾಸಿ ರಮ್ಯಾ ಉಲ್ಲಾಸ್, ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಒಟಿ ಟೆಕ್ನಿಷಿ ಯನ್ ಆಗಿ ಕೆಲಸ ಮಾಡುತ್ತಿದ್ದರು. ಊರಿಗೆ ತೆರಳುವ ಉದ್ದೇಶದಿಂದ ರಮ್ಯಾ ಕಾರು ಬುಕ್ ಮಾಡಿದ್ದರು. ಅವರೊಂದಿಗೆ ನಾಗೇಂದ್ರ ಕೂಡ ಪ್ರಯಾಣ ಬೆಳೆಸಿದ್ದ. ತುಮಕೂರು ದಾಟುತ್ತಿದ್ದಂತೆ ನಾಗೇಂದ್ರ ಮತ್ತು ರಮ್ಯಾ ನಡುವೆ ಜಗಳ ನಡೆದಿದೆ. ಮಾತಿನ ಚಕಮಕಿ ವಿಕೋ ಪಕ್ಕೆ ಹೋದಾಗ ನಾಗೇಂದ್ರ ತಾನು ಮೊದಲೇ ಪ್ಲಾನ್ ಮಾಡಿ ತಂದಿದ್ದ ಚಾಕುವಿನಿಂದ ರಮ್ಯಾ ಅವರ ತಲೆ ಹಾಗೂ ದೇಹದ ಭಾಗಕ್ಕೆ ಮನಸೋ ಇಚ್ಛೆ ಚುಚ್ಚಿ ದ್ದಾನೆ. ಈ ವೇಳೆ ಪೆಟ್ರೋಲ್ ಬಾಂಬ್ ಇದೆ ಎಂಬುದು ಯುವತಿಗೆ ತಿಳಿದಿದೆ. ನಾಗೇಂದ್ರನ ರೌದ್ರಾವತಾರದಿಂದ ಬೆಚ್ಚಿಬಿದ್ದ ರಮ್ಯಾ ಬೊಬ್ಬೆ ಹೊಡೆದು ಜೀವ ಉಳಿಸಿಕೊಳ್ಳಲು ಚಲಿಸುತ್ತಿದ್ದ ಕಾರಿನಿಂದಲೇ ಹೊರಗೆ ಹಾರಿದ್ದಾರೆ. ಕಾರಿನೊಳಗೆ ನಡೆಯುತ್ತಿದ್ದ ಈ ಭೀಕರ ದೃಶ್ಯ ಹಾಗೂ ಯುವತಿ ಕೆಳಗೆ ಬಿದ್ದಿದ್ದನ್ನು ಕಂಡು ಗಾಬರಿಗೊಂಡ ಚಾಲಕ ತಕ್ಷಣವೇ ಕಾರನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿ ಇಳಿದಿದ್ದಾನೆ. ಚಾಲಕ ಕೆಳಗೆ ಇಳಿಯುತ್ತಿದ್ದಂತೆಯೇ ನಾಗೇಂದ್ರ ಒಳಗಿನಿಂದ ಕಾರಿನ ಎಲ್ಲಾ ಡೋರ್‌ಗಳನ್ನು ಸೆಂಟ್ರಲ್ ಲಾಕ್ ಮಾಡಿಕೊಂಡಿದ್ದಾನೆ. ಬಳಿಕ ಪೆಟ್ರೋಲ್ ಬಾಂಬ್ ಸಿಡಿಸಿಕೊಂಡು ಸಜೀವ ದಹನವಾಗಿದ್ದಾನೆ. ಇಡೀ ಕಾರು ಧಗಧಗನೆ ಹೊತ್ತಿ ಉರಿದಿದೆ. ನಾಗೇಂದ್ರ ತಾನು ಮೊದಲೇ ಸಿದ್ಧಪಡಿಸಿಕೊಂಡು ತಂದಿದ್ದ ಪೆಟ್ರೋಲ್ ಬಾಂಬ್ ಅನ್ನು ಕಾರಿನೊಳಗೆ ಸಿಡಿಸಿದ್ದಾನೆ ಎಂದು ಶಂಕಿಸಲಾಗಿದೆ. ಬೆಂಕಿ ಇಡೀ ಕಾರನ್ನು ಆವರಿಸಿದ್ದರಿಂದ ನಾಗೇಂದ್ರನಿಗೆ ಹೊರಬರಲು ಸಾಧ್ಯವಾಗದೆ ಕಾರಿನೊಳಗೇ ಸಜೀವ ದಹನವಾಗಿದ್ದಾನೆ. ಹೆದ್ದಾರಿಯಲ್ಲೇ

ಪುಟ 2ಕ್ಕೆ

## ಸಿದ್ದು ಜೊತೆ ಭಿನ್ನಾಭಿಪ್ರಾಯವಿಲ್ಲ

### ನಾವಿಬ್ಬರೂ ಒಗ್ಗಟ್ಟಿನಿಂದ ಇದ್ದೇವೆ: ಜಾರಕಿಹೊಳಿ ಸ್ಪಷ್ಟನೆ

**ಬೆಳಗಾವಿ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಯಾವುದೇ ಭಿನ್ನಾಭಿಪ್ರಾಯ ಅಥವಾ ಮುನಿಸಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.



ಮಾಧ್ಯಮಗಳ ಜೊತೆ ಮಾತನಾಡಿದ ಅವರು ಸಿದ್ದರಾಮಯ್ಯ ಜೊತೆಗಿನ ಸಂಬಂಧದಲ್ಲಿ ಯಾವುದೇ ಬಿರುಕಿಲ್ಲ. ನಾವಿಬ್ಬರೂ ಒಗ್ಗಟ್ಟಿನಿಂದ ಇದ್ದೇವೆ.

ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾವು ಒಟ್ಟಿಗೆ ಇದ್ದೇವೆ ಮತ್ತು ಮುಂದೆ ಭವಿಷ್ಯದಲ್ಲಿ ಒಟ್ಟಿಗೆ ಇರುತ್ತೇವೆ

ಪುಟ 2ಕ್ಕೆ

## ಶಾಸಕ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ಎಸೆತ



**ಚಿಕ್ಕಬಳ್ಳಾಪುರ:** ನಗರದಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿಯಲ್ಲಿ ಹೈಡ್ರಾಮಾ ನಡೆದಿದೆ. ಶಾಸಕ ಪ್ರದೀಪ್ ಈಶ್ವರ್ ಅವರನ್ನು ಕಾರ್ಯಕ್ರಮದ ವೇದಿಕೆಯಿಂದ ಆಚೆ ಕಳುಹಿಸುವಂತೆ ಕುಮಾರಸ್ವಾಮಿ, ಸಂಸದ ಡಾ.ಕೆ ಸುಧಾಕರ್ ಬೆಂಬಲಿಗರು

ಪುಟ 2ಕ್ಕೆ

# ಬಸ್ ಟಿಕೆಟ್ ದರ ಏರಿಕೆ?

## ಸಾರಿಗೆ ನಿಗಮಗಳಿಗೆ ನಷ್ಟ: ಸಚಿವ ಬೈರತಿ ಸುರೇಶ್

ಬೆಂಗಳೂರು: ರಾಜ್ಯದಲ್ಲಿ ಶೀಘ್ರದಲ್ಲೇ ಸಾರಿಗೆ ಬಸ್ ಟಿಕೆಟ್ ದರ ಏರಿಕೆಯಾಗುವ ಸ್ಪಷ್ಟ ಸುಳಿವನ್ನು ಸಾರಿಗೆ ಸಚಿವ ಬೈರತಿ ಸುರೇಶ್ ನೀಡಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಇಡೀ ದೇಶದಲ್ಲಿ ತೈಲ ದರ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಕಾರಣವೇ ಅಥವಾ ರಾಜ್ಯ ಸರ್ಕಾರ ಕಾರಣವೇ ಎಂದು ತಾವು ರಾಜಕೀಯವಾಗಿ ವಿಶ್ಲೇಷಿಸಲು ಬಯಸುವುದಿಲ್ಲ. ಆದರೆ, ತೈಲ ಬೆಲೆ ಏರಿಕೆಗೆ ಅನುಪಾತವಾಗಿ ಬಸ್ ಟಿಕೆಟ್ ದರವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಈ ಪ್ರಸ್ತಾವನೆ ಸದ್ಯ ಪರಿಶೀಲನೆಯಲ್ಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚಿಸಿದ ಬಳಿಕ ಸರ್ಕಾರದ ಅಧಿಕೃತ ತೀರ್ಮಾನದಂತೆ ದರ ಹೆಚ್ಚಳ ಮಾಡಲಾಗುವುದು ಎಂದು ತಿಳಿಸಿದರು.

**ಸಾರಿಗೆ ನಿಗಮಗಳ ಆರ್ಥಿಕ ಸಂಕಷ್ಟ**

ಬಸ್ ಟಿಕೆಟ್ ದರ ಹೆಚ್ಚಳವನ್ನು ವಿರೋಧಿಸಲು ವಿರೋಧ ಪಕ್ಷಗಳಿಗೆ ಯಾವುದೇ ಪ್ರಬಲ ಕಾರಣಗಳೇ ಇಲ್ಲ ಎಂದು ಸಚಿವರು ಪ್ರತಿಪಾದಿಸಿದರು. ದೇಶ ದಲ್ಲಿ ತೈಲ ದರ ಹೆಚ್ಚಳವಾಗಿರುವುದು ಬಿಜೆಪಿಯ ವರಿಗೂ ಗೊತ್ತಿರುವ ವಿಚಾರವೇ ಆಗಿದೆ. ಪ್ರಸ್ತುತ ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳು ಭಾರಿ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಒಟ್ಟಾರೆಯಾಗಿ ಸುಮಾರು 5,000 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿ ಚಲಿಸುತ್ತಿವೆ. ಈ ಬೃಹತ್ ನಷ್ಟವನ್ನು ಸರಿದೂಗಿಸುವುದು, ಸಾರಿಗೆ ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿಸುವುದು ಹಾಗೂ ದಿನನಿತ್ಯ ಬಸ್ಗಳಿಗೆ ಡೀಸೆಲ್ ಹಾಕಿಸುವುದು ಅನಿವಾರ್ಯವಾಗಿದೆ. ಈ ಎಲ್ಲಾ ಸೂಕ್ಷ್ಮ ವಿಚಾರಗಳ ಕುರಿತು ಜಂಟಿಯಾಗಿ ಚರ್ಚಿಸಿ ಟಿಕೆಟ್ ದರ ಪರಿಷ್ಕರಣೆಯ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು. ಇದೇ ವೇಳೆ ವಿದ್ಯಾರ್ಥಿಗಳ ಬಸ್ ಪಾಸ್ ವಿತರಣೆಯಲ್ಲಿ ಯಾವುದೇ ಸಮಸ್ಯೆಯಾಗಿಲ್ಲ ಎಂದು ಸ್ಪಷ್ಟಪಡಿಸಿದ ಸಚಿವರು, ಪ್ರಕ್ರಿಯೆಯನ್ನು ಮತ್ತಷ್ಟು ವ್ಯವಸ್ಥಿತಗೊಳಿಸಿ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಪಾಸ್ ವಿತರಿಸಲಾಗುವುದು ಎಂದು ಭರವಸೆ ನೀಡಿದರು.



### ಕುಮಾರಸ್ವಾಮಿ ಸವಾಲಿಗೆ ತಿರುಗೇಟು

ಇದೇ ಸಂದರ್ಭದಲ್ಲಿ ಬಿಡದಿ ಟೌನ್ಶಿಪ್ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಹಾಕಿದ್ದ ಬಹಿರಂಗ ಚರ್ಚೆಯ ಸವಾಲಿಗೆ ಸಚಿವ ಬೈರತಿ ಸುರೇಶ್ ತೀಕ್ಷ್ಣವಾಗಿ ತಿರುಗೇಟು ನೀಡಿದರು. ಬಿಡದಿ ಟೌನ್ಶಿಪ್ ವಿಚಾರದಲ್ಲಿ ವಿರೋಧ ಪಕ್ಷಗಳು ಅನಗತ್ಯವಾಗಿ ರಾಜಕಾರಣ ಮಾಡುವುದನ್ನು ಬಿಟ್ಟು ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಲು ಮುಂದಾಗಬೇಕು ಎಂದರು.

ರಾಜಕೀಯ ಇತಿಹಾಸದಲ್ಲಿ ಎಂದಾದರೂ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರು ರಸ್ತೆಯಲ್ಲಿ ನಿಂತು ಬಹಿರಂಗವಾಗಿ ಚರ್ಚೆ ಮಾಡಿರುವ ಉದಾಹರಣೆ ಇದೆಯೇ? ಅದನ್ನು ಬಿಟ್ಟು ಅಲ್ಲಿಗೆ ಬನ್ನಿ, ಇಲ್ಲಿಗೆ ಬನ್ನಿ ಎಂದು ಚರ್ಚೆಗೆ ಕರೆಯುವುದು ಎಷ್ಟು ಸರಿ ಎಂದು ಪ್ರಶ್ನಿಸುವ ಮೂಲಕ ಕುಮಾರಸ್ವಾಮಿ ಅವರ ನಡೆಯನ್ನು ತಳ್ಳಿಹಾಕಿದರು.

## ಟೌನ್‌ಶಿಪ್ ಪರ ರೈತರಿಂದ ಎಚ್‌ಡಿಕೆ ವಿರುದ್ಧ ಆಕ್ರೋಶ

**ರಾಮನಗರ:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಸಭೆ ನಡೆಸಲು ಭೈರಮಂಗಲಕ್ಕೆ ಶನಿವಾರ ಭೇಟಿ ನೀಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕೆಲವು ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

ಎಚ್‌ಡಿಕೆ ಪರ–ವಿರುದ್ಧ ರೈತರಿಂದ ಘೋಷಣೆ ಕೇಳಿಬಂದಿದೆ. ಯೋಜನೆ ವಿರುದ್ಧ ಇರುವ ರೈತರು ಎಚ್‌ಡಿಕೆ ಪರ ಮಾತನಾಡಿದರು. ಯೋಜನೆ ಪರ ಇರುವ ರೈತರು ಕೇಂದ್ರ ಸಚಿವರ ವಿರುದ್ಧ ಆಕ್ರೋಶ ಹೊರಹಾಕಿದರು.

ಎಚ್‌ಡಿಕೆ ಆಗಮನ ಹಿನ್ನೆಲೆಯಲ್ಲಿ ಎರಡೂ ಕಡೆಯ ರೈತರು ಭೈರಮಂಗಲದಲ್ಲಿ ಜಮಾಯಿಸಿದ್ದರು. ರೈತರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ರೈತರ ಗಲಾಟೆ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಮಾರ್ಗದಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

ಭೈರಮಂಗಲಕ್ಕೆ ಕುಮಾರಸ್ವಾಮಿ ಆಗಮಿಸಿದ ಬೆನ್ನಲ್ಲೇ ಯೋಜನೆ ಪರ ಇರುವ ರೈತರು ಎಚ್‌ಡಿಕೆ ವಿರುದ್ಧ ಘೋಷಣೆ ಕೂಗಿದರು. ರೆಡ್ ಝೋನ್ ಮಾಡಿದ ಕುಮಾರಸ್ವಾಮಿಗೆ ಧಿಕ್ಕಾರ. ರೆಡ್ ಝೋನ್ ಪಿತಾಮಹ ಕುಮಾರಸ್ವಾಮಿ. ಯೋಜನೆ ಮಾಡಿ ಈಗ ಬೇಡಾ ಎನ್ನುವ ಕುಮಾರಣ್ಣನಿಗೆ ಧಿಕ್ಕಾರ ಎಂದು ರೈತರು ಆಕ್ರೋಶ ಹೊರಹಾಕಿದರು. ನಮ್ಮ ಸ್ಥಳಕ್ಕೆ ಕುಮಾರಸ್ವಾಮಿ ಬರಲೇಬೇಕೆಂದು ಆಗ್ರಹಿಸಿದರು. ಕುಮಾರಸ್ವಾಮಿ ಪೊಲೀಸರ ರಕ್ಷಣೆಯಲ್ಲಿ ಓಡಿ ಹೋಗಿದ್ದಾರೆ ಎಂದು ಪ್ರತಿಭಟನಾಕಾರರು ಲೇವಡಿ ಮಾಡಿದರು.



ಈ ವೇಳೆ ಯೋಜನೆ ವಿರುದ್ಧ ಇದ್ದ ರೈತರು ಕುಮಾರಸ್ವಾಮಿ ಆಗಮನಕ್ಕೆ ಹರ್ಷೋದ್ಗಾರ ವ್ಯಕ್ತಪಡಿಸಿದರು. ಜೊತೆಗೆ ವಿರೋಧ ಇದ್ದ ರೈತರ ಜೊತೆ ಗಲಾಟೆಗೆ ಇಳಿದರು. ಎರಡೂ ಕಡೆಯ ರೈತರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು.

## ಅಂಬಾನಿ ನೀಡಿದ್ದ 900 ಕೋಟಿ ದೇಣಿಗೆ ಲೆಕ್ಕ ಎಲ್ಲಿ: ಹರಿಪ್ರಸಾದ್

**ಬೆಂಗಳೂರು:** ರಾಮ ಮಂದಿರಕ್ಕೆ ಮುಕೇಶ್ ಅಂಬಾನಿ 900 ಕೋಟಿ ದೇಣಿಗೆ ನೀಡಿದ್ದರು. ಅದಕ್ಕೆ ಲೆಕ್ಕ ಎಲ್ಲಿ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಮಂದಿರ ದೇಣಿಗೆ ವಿವಾದ ಕುರಿತು ಶಿವಸೇನೆ ಸಂಜಯ್ ರಾವತ್ ಪ್ರಶ್ನೆಕೇಳಿದ ವಿಚಾರಕ್ಕೆ ಪ್ರತಿಕ್ರಿಯಿಸಿದರು. ರಾಮಮಂದಿರ ಟ್ರಸ್ಟ್ ನವರು ಲೆಕ್ಕ ಕೊಡಲ್ಲ ಅಂತಾರೆ. ಇವರು ರಾಮನನ್ನೂ ಬಿಟ್ಟಿಲ್ಲ. ರಾಮನ ಹೆಸರಲ್ಲಿ ಕಳ್ಳತನ, ಲೂಟಿ ಮಾಡಿದ್ದಾರೆಂದು ಕಿಡಿ ಕಾರಿದರು.




ಇತಿಹಾಸ ಅಂದರೆ ಮಹಮ್ಮದ್ ಘಜ್ನಿ ಅಂತಾರೆ. ಲೂಟಿ ಹೊಡೆದವನು ಅಂತ ಬಿಜೆಪಿಯವರು ಹೇಳ್ತಾರೆ. ಘಜ್ನಿ ಬಿಟ್ಟರೆ ಬಿಜೆಪಿಯವರೇ ಅತಿ ಹೆಚ್ಚು ಲೂಟಿ ಮಾಡಿದ್ದು. ಈ ಹಿಂದೆ ರಾಮಮಂದಿರ ಕಟ್ತೇವೆ ಅಂತ ಲೂಟಿ ಹೊಡೆದಿದ್ದರು. ಅಂಬಾನಿ ಕೊಟ್ಟ 900 ಕೋಟಿ ದೇಣಿಗೆಗೂ ಲೆಕ್ಕ ಇಲ್ಲ. ಈಗ

# ಬಿಜೆಪಿ ಅಡ್ಡಮತ: ವರದಿ ಸಲ್ಲಿಕೆ

## ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಸಿ.ಟಿ.ರವಿ ತನಿಖಾ ವರದಿ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದಿ ರುವ ಅಡ್ಡ ಮತದಾನ ಪ್ರಕರಣದ ಬಗ್ಗೆ ತನಿಖೆ ನಡೆಸಿದ್ದ ಸಿ.ಟಿ.ರವಿ ನೇತೃತ್ವದ ಸತ್ಯಶೋಧನಾ ಸಮಿತಿಯು ಶನಿವಾರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿದೆ.

ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ, ಶಾಸಕ ಮಹೇಶ್ ಟೆಂಗಿನಕಾಯಿ ಹಾಗೂ ಮಾಜಿ ಶಾಸಕ ಎನ್.ಮಹೇಶ್ ನೇತೃ ತ್ವದ ತ್ರಿಸದಸ್ಯ ಸಮಿತಿ ನೇಮಕ ಮಾಡಲಾಗಿತ್ತು. ಸಮಿತಿಯು ಸಾಂದರ್ಭಿಕ ಸಾಕ್ಷಿ, ಶಂಕೆ, ಮೂಲಗಳಿಂದ ಸಂಗ್ರಹಿಸಿದ ಮಾಹಿತಿ ಹಾಗೂ ಅನುಮಾನ ಇದ್ದ ಶಾಸಕರಿಂದ ಪಡೆದ ಮಾಹಿತಿ ಆಧರಿಸಿ ವರದಿ ಸಿದ್ಧಪಡಿಸಿದೆ. ಈ ವರದಿಯನ್ನು ಬಿಜೆಪಿ ಕಚೇರಿಯಲ್ಲಿ ಸಲ್ಲಿಕೆ ಮಾಡಿದ್ದು, ಬಳಿಕ ಬಿವೈವಿ ಹಾಗೂ ಸಿಟಿ ರವಿ ಇಬ್ಬರೂ ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದಾರೆ. ನಾಲ್ಕು ದಿನಗಳ ಕಾಲ ಆಂತರಿಕ ತನಿಖೆ ನಡೆಸಿದ ಸಮಿತಿ ಒಟ್ಟು ಮೂರು ಪುಟಗಳ ವರದಿಯನ್ನು ಸೀಲ್ಡ್ ಕವರ್‌ನಲ್ಲಿ ಸಲ್ಲಿಕೆ ಮಾಡಿದೆ. ಮೈತ್ರಿ ಪಕ್ಷಗಳಿಂದ ಒಟ್ಟು 12 ಶಾಸಕರು ಅಡ್ಡ ಮತ ದಾನ ಮಾಡಿದ್ದಾರೆ. ಈ ಪೈಕಿ 1 ಅಸಿಂಧು




ಪುಟ 2ಕ್ಕೆ

### ಸಹಮತದ ವರದಿ: ಸಿ.ಟಿ.ರವಿ

ವರದಿ ಸಲ್ಲಿಕೆ ಬಳಿಕ ಮಾಧ್ಯಮದವರೊಂದಿಗೆ ಸಿಟಿ ರವಿ ಮಾತನಾಡಿ, ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರು ಅಡ್ಡ ಮತ ಆಗಿರುವ ಬಗ್ಗೆ ಆಂತರಿಕ ಸತ್ಯ ಶೋಧನೆಗೆ ಮೂರು ಜನರ ಸಮಿತಿ ಮಾಡಿದ್ದರು. ಆದಷ್ಟು ಬೇಗ ತನಿಖೆ ನಡೆಸಿ ವರದಿ ಕೊಡಲು ಹೇಳಿದ್ದರು. ಅದರಂತೆ ನಾವು ನಾಲ್ಕು ದಿನಗಳಲ್ಲಿ ವರದಿ ಸಲ್ಲಿಕೆ ಮಾಡಿದ್ದೇವೆ. ಸಮಿತಿಯ ಮೂವರಿಗೂ ಸಹಮತ ಇರುವ ಅಂಶಗ ಳನ್ನು ವರದಿಯಲ್ಲಿ ಉಲ್ಲೇಖಿಸಿದ್ದೇವೆ. ಕೆಲವು ಶಾಸಕರ ಈ ನಡೆ ಪ್ರಜಾಪ್ರಭುತ್ವ ವಿರೋಧಿ. ಬೇರೆ ಚುನಾವಣೆಯಲ್ಲಿ ಕ್ರಾಸ್ ವೋಟಿಂಗ್ ಆದರೆ ಕಾಂಗ್ರೆಸ್‌ಗೆ ಪ್ರಶ್ನಿಸುವ ನೈತಿಕತೆ ಇಲ್ಲ. ಇನ್ನುಳಿದಿದ್ದನ್ನ ಅಧ್ಯಕ್ಷರು ತೀರ್ಮಾನ ಮಾಡುತ್ತಾರೆ.

ಪುಟ 2ಕ್ಕೆ

## ಭೀಕರ ಅಪಘಾತ: ನಾಲ್ವರು ಸಾವು

**ಕೊಪ್ಪಳ:** ಕುಕನೂರು ತಾಲ್ಲೂಕಿನ ಭಾನಾಪುರ ಬಳಿಯ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ನಡೆದ ಭೀಕರ ರಸ್ತೆ ಅಪಘಾತದಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಆರು ಮಂದಿ ಗಾಯಗೊಂಡಿದ್ದಾರೆ.

ಕೆಂಚಮ್ಮ ಬಾಳೆಕಾಯಿ (35), ಅಮೃತಾ ಕೋಟ್ಯಾಳ್ (25), ರಮೇಶ್ ಬಳ್ಳಾರಿ (45), ಪ್ರವೀಣ್ (23) ಮೃತಪಟ್ಟವರು. ಇವರೆಲ್ಲರೂ ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಕಬ್ಬಾರ್ ಗ್ರಾಮದವರು. ಓಮಿನಿ ಕಾರಿಗೆ ಪಕ್ಕದ ರಸ್ತೆಯಿಂದ ಬರುತ್ತಿದ್ದ



ಪುಟ 2ಕ್ಕೆ

## ನಿರ್ಮಾಪಕ ಉಲ್ಲಾಸ್ ಹೃದಯಾಘಾತಕ್ಕೆ ಬಲಿ

**ಬೆಂಗಳೂರು:** ನಿರ್ಮಾಪಕ ಭಾ.ಮಾ.ಹರೀಶ್ ಪುತ್ರ ಉಲ್ಲಾಸ್‌ಗೌಡ ಹೃದಯಾಘಾತದಿಂದ ಶನಿವಾರ ನಿಧನರಾಗಿದ್ದಾರೆ. ಉಲ್ಲಾಸ್‌ಗೌಡ ಅವರು ಶಿವಮೊಗ್ಗದ ಕೊಡಚಾದ್ರಿಗೆ ಟ್ರೆಕ್ಕಿಂಗ್‌ಗೆ ಹೋಗಿದ್ದರು. ಈ ವೇಳೆ ಅವರಿಗೆ ಹೃದಯಾಘಾತ ಆಗಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ, ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ.

ಉಲ್ಲಾಸ್‌ಗೌಡ ಅವರಿಗೆ ಮದುವೆ ನಿಶ್ಚಯವಾಗಿತ್ತು. ಆಗಸ್ಟ್‌ನಲ್ಲಿ ನಿಶ್ಚಿತಾರ್ಥ ನಡೆಯಲಿತ್ತು. ಮದುವೆ ಸಂಭ್ರಮದಲ್ಲಿದ್ದ ಮನೆಯಲ್ಲಿ ಈಗ ಸೂತಕದ ಛಾಯೆ ಆವರಿಸಿದೆ.

ಉಲ್ಲಾಸ್ ಕೂಡ ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದರು. ನಿರ್ಮಲಾ ಹೆಸರಿನ ಮಕ್ಕಳ ಚಿತ್ರದ ಮೂಲಕ ಸಿನಿಮಾ ರಂಗಪ್ರವೇಶ ಮಾಡಿದ್ದರು. ಉಲ್ಲಾಸ್ ಕ್ಲಾಸ್ ಆಫ್ ಸಿನಿಮಾಸ್ ಹೆಸರಿನ ಸಂಸ್ಥೆ ಹುಟ್ಟುಹಾಕಿದ್ದರು.

## ಚೀಲದಲ್ಲಿ ತುಂಬಿಟ್ಟಿದ್ದ 3 ಕೋಟಿ ಹಣ ಪತ್ತೆ

**ಬೆಂಗಳೂರು:** ಶೆಡ್ ವೊಂದರಲ್ಲಿ ಸಿಮೆಂಟ್ ಚೀಲದಲ್ಲಿ ತುಂಬಿಟ್ಟಿದ್ದ ದಾಖಲೆ ಇಲ್ಲದ ಸುಮಾರು 3 ಕೋಟಿ ನಗದು ಪತ್ತೆಯಾಗಿದೆ. ಬೆಂಗಳೂರು ಪೊಲೀಸರು ಹಣವನ್ನು ವಶಕ್ಕೆ ಪಡೆದು ತನಿಖೆ ಆರಂಭಿಸಿದ್ದಾರೆ.

ಬ್ಯಾಂಕ್ ಸಾಲ ತೀರಿಸಲು ಹಣ ತಂದಿರುವುದಾಗಿ ಮಾಲೀಕರು ಹೇಳಿದ್ದಾರೆ. ಆದರೆ, ಯಾವುದೇ

ಪುಟ 2ಕ್ಕೆ



## ಧರ್ಮಾಧಿಕಾರಿ ಅವಹೇಳನ: ವಿಠ್ಠಲಗೌಡ ಬಂಧನಕ್ಕೆ ಆದೇಶ

**ಮಂಗಳೂರು:** ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಧರ್ಮಸ್ಥಳ ಕ್ಷೇತ್ರದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡದಂತೆ ಕೋರ್ಟ್ ಆದೇನೀಡಿದ್ದರೂ ನಿಂದನಾತ್ಮಕ ಹೇಳಿಕೆ ನೀಡಿದ್ದ ಆರೋಪದ ಮೇಲೆ ಮೃತ ಸೌಜನ್ಯ ಮಾವ ವಿಠ್ಠಲ್ ಗೌಡ ವಿರುದ್ಧ ಬೆಂಗಳೂರಿನ ನ್ಯಾಯಾಲಯ ಬಂಧನ ವಾರಂಟ್ ಜಾರಿಗೊಳಿಸಿದೆ. ವಿಠ್ಠಲ್ ಗೌಡ ಪತ್ತೆಗೆ ಪೊಲೀಸರು ಶೋಧ ನಡೆಸಿದ್ದಾರೆ.

ಬೆಂಗಳೂರಿನ 6ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಜೂನ್ 8ರಂದು ವಾರೆಂಟ್ ಜಾರಿಗೊಳಿಸಿತ್ತು. ವಿಠ್ಠಲ್ ಗೌಡನನ್ನು ಬಂಧಿಸಿ ಜೂನ್ 30ರೊಳಗೆ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಆದೇಶ ನೀಡಲಾಗಿದೆ. ತನ್ನ ವಿರುದ್ಧ ಬಂಧನ ವಾರೆಂಟ್ ಜಾರಿಯಾಗುತ್ತಿದ್ದಂತೆ ವಿಠ್ಠಲ್ ಗೌಡ ತಲೆಮರೆಸಿಕೊಂಡಿದ್ದಾರೆ. ಕುಸುಮಾವತಿ ನಿವಾಸ ಹಾಗೂ ಮಹೇಶ್ ಶೆಟ್ಟಿ ತಿಮರೋಡಿ ನಿವಾಸದಲ್ಲಿಯೂ ಪೊಲೀಸರು ತಪಾಸಣೆ ನಡೆಸಿದ್ದಾರೆ.

## ಇಸ್ಲಾಂಗೆ ಮತಾಂತರಗೊಂಡರೆ ಒಬಿಸಿ ಮೀಸಲಾತಿ ನೀಡುವಂತಿಲ್ಲ

### ತಮಿಳುನಾಡು ಹೈಕೋರ್ಟ್ ಐತಿಹಾಸಿಕ ತೀರ್ಪು

**ಚೆನ್ನೈ:** ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡವರು ಹಿಂದುಳಿದ ವರ್ಗ ಕೋಟಾದಡಿ ಮೀಸಲಾತಿ ಪಡೆಯಲು ಸಾಧ್ಯವಿಲ್ಲ ಎಂದು ತಮಿಳುನಾಡು ಹೈಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ.

ಇಸ್ಲಾಂಗೆ ಮತಾಂತರಗೊಂಡವರಿಗೆ ಹಿಂದುಳಿದ ವರ್ಗದ ಮೀಸಲಾತಿ ನೀಡುವ ತಮಿಳುನಾಡು ಸರ್ಕಾರದ 2024ರ ಆದೇಶವನ್ನು ನ್ಯಾಯಾಲಯ ಅಸಂವಿಧಾನಿಕ ಎಂದು ಘೋಷಿಸಿದೆ.

ಧಾರ್ಮಿಕ ಮತಾಂತರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ತೀರ್ಪು ಪ್ರಕಟಿಸಿರುವ ಮದ್ರಾಸ್ ಹೈಕೋರ್ಟ್, ಮತಾಂತರದ ನಂತರ ಅವರು ಕೇವಲ ಮುಸ್ಲಿಂ ಮತ್ತು ಇನ್ನೇನೂ ಅಲ್ಲ ಎಂದು ತಿಳಿಸಿದೆ.




ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡಿದ್ದ ವ್ಯಕ್ತಿಯೊಬ್ಬ 2016ರಲ್ಲಿ

ಪುಟ 2ಕ್ಕೆ

# ಭಗವದ್ಗೀತೆಯ ಸಾರ, ಶರಣರ ಶಿವಯೋಗ ಪ್ರವಚನ ಮಾಲೆ



ಗುಂಡ್ಲುಪೇಟೆ :– ಪಟ್ಟಣದಲ್ಲಿ ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಹಳೆ ಬಸ್ ಸ್ಟ್ಯಾಂಡ್ ನಿಲ್ದಾಣದ ಬಯಲು ರಂಗ ಮಂದಿರದಲ್ಲಿ ಇಂದಿನಿಂದ ಒಂದು ವಾರಗಳ ಕಾಲ ನಡೆಯುವ ಭಗವದ್ಗೀತೆಯ ಸಾರ, ಚಿಂತಾಮಕ್ತ ಮತ್ತು ಬಂಧನ ಮುಕ್ತ ಜೀವನಕ್ಕೆ ಆಧಾರ ಹಾಗೂ ಶರಣರ ಶಿವಯೋಗ ಪ್ರವಚನ ಮಾಲೆಗೆ ಕಬ್ಬಿಣ ಕೋಲೇಶ್ವರ ಗೋಪಾಲಪುರ ಮಠಾಧ್ಯಕ್ಷರಾದ ಗಂಗಾಧರ ಮಹಾಸ್ವಾಮಿಗಳು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಗೀತೆಯ ಸಾರ ಹಾಗೂ ಶಿವಶರಣರ ವಚನಗಳು ಒಂದೇ ಸಾಮ್ಯತೆಯನ್ನು ಹೊಂದಿದ್ದು ಅದನ್ನು ಸರಳೀಕರಿಸಿ ಜನತೆಗೆ ಮುಟ್ಟಿಸುತ್ತಿರುವ ಶಿವಮಣೀಜೀಯವರ ಕಾರ್ಯ ಮೆಚ್ಚುವಂಥದ್ದು ಎಂದು ಪ್ರಶಂಸಿದರು.

ಚಿಂತೆ ಯಾರಿಗೆ ತಾನೇ ಇಲ್ಲ.ಶಿವನ ಚಿಂತನದಲ್ಲಿ ಪರಿವರ್ತನೆ ಮಾಡಿಕೊಳ್ಳುವುದೇ ರಾಜಯೋಗ ಶಿಕ್ಷಣದ ಉದ್ದೇಶ ಬ್ರಹ್ಮಾಕುಮಾರಿಯರ ಉದ್ದೇಶವಾಗಿದೆ ಎಂದರು.

ಪ್ರೇರಣಾತ್ಮಕ ಭಾಷಣಕಾರರು ಪ್ರವಚನಕಾರರು ಆದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವಮಣೀಜೀ ಮಾತನಾಡಿ ಭಗವದ್ಗೀತೆಯ ಸಾರ ಸುಖ ಮತ್ತು ನೆಮ್ಮದಿಯ ಜೀವನಕ್ಕೆ ಆಧಾರವಾಗಿದೆ. ಭಗವದ್ಗೀತೆಯಿಂದ ಮನಸ್ಸಿಗೆ ಶಾಂತಿ ಪ್ರಾಪ್ತಿಯಾಗುತ್ತದೆ. ಗೀತಾ ಜ್ಞಾನದಿಂದ ಸ್ವಾನುಭೂತಿ, ಪರಮಾತ್ಮನ ಅನುಭೂತಿ, ಸಾರ್ಥಕ ಬದುಕುವ ಕಲೆ ಕರ್ಮಯೋಗ ರಾಜಯೋಗ ಕಾಲಚಕ್ರ ರಹಸ್ಯ ಶಿವಯೋಗ ಶಿವಾನುಭೂತಿ ಇನ್ನು ಅನೇಕ ವಿಚಾರಗಳನ್ನು ಪ್ರಾಪ್ತಿ ಮಾಡಿಸುವಂತಹದ್ದಾಗಿದೆ. ಇದರ ಪೂರ್ಣ ಲಾಭವನ್ನು ಪಡೆದುಕೊಳ್ಳಬೇಕೆಂದು ಪಟ್ಟಣದ ಜನತೆಗೆ ಕರೆ ನೀಡಿದರು.

ಜಿಲ್ಲಾ ಸಂಚಾಲಕಿ ರಾಜಯೋಗಿನಿ ಪ್ರಭಾಮಣೀಜೀ ವೀಣಾಜೀ, ಸರ್ಕಲ್ ಇನ್ ಸ್ಪೆಕ್ಟರ್ ಜಯ ಕುಮಾರ್, ವೀರಶೈವ ಮಹಾಸಭಾ ಅಧ್ಯಕ್ಷ. ರಾಜಶೇಖರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಓಂ ಶಾಂತಿ ನ್ಯೂಸ್ ಸರ್ವಿಸ್.ಬಿ.ಕೆ ಆರಾಧ್ಯ,ನಾಗಣ್ಣ, ರಾಜು,ಗುರುಸ್ವಾಮಿ, ಸರೋಜ, ಮಹಾಲಕ್ಷ್ಮಿ, ಸಂತೋಷ್, ಶ್ರೀನಿವಾಸ್, ಮಹೇಶ್, ಸಿದ್ದೇಶ್ವರ ಸ್ವಾಮೀಜಿ, ವರನಾಗಭೂಷಣ ಮುಂತಾದವರು ಹಾಜರಿದ್ದರು.

# ಅಕ್ರಮ ಪಡಿತರ ಸಾಗಾಣೆ: ದಾಳಿ



ಚಾಮರಾಜನಗರ, ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಗಳ ಮೇಲೆ ಪೊಲೀಸರು ದಾಳಿ ನಡೆಸಿದ್ದು, ವಾಹನ ಮತ್ತು ಅಕ್ಕಿಯನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೇಗೂರು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕ ಎಚ್.ಕೆ.ನವೀನ್ ಅವರು ತಮಗೆ ದೊರೆತ ಮಾಹಿತಿ ಮೇರೆಗೆ, ಠಾಣಾ ಸಿಬ್ಬಂದಿಗಳೊಂದಿಗೆ ಸರಹದ್ದಿನ ಸಂಪಿಗೆ ಪುರ ಕ್ರಾಸ್ ಬಳಿ ಗುಂಡ್ಲುಪೇಟೆ ಕಡೆಯಿಂದ ವಾಹನದಲ್ಲಿ ಪಡಿತರ ಅಕ್ಕಿ ಇರುವ ಮೂಟೆಗಳನ್ನು ಅಕ್ರಮವಾಗಿ ಸಾಗಣಿಕೆ ಮಾಡಿಕೊಂಡು ಬರುತ್ತಿದ್ದ ಮೊಹಮ್ಮದ್ ಜಿಯಾ ಉಲ್ಲ ಬಿನ್ ಕಲಿಲ್, 29 ವರ್ಷ, ಕಲ್ಕುಣಿ ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ಎಂಬಾತನ ಮೇಲೆ ದಾಳಿ ನಡೆಸಿ. ಆರೋಪಿಯಿಂದ 30,000 ರೂ, ಮೌಲ್ಯದ 20 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಮತ್ತು ಗೂಡ್ಸ್ ವಾಹನವನ್ನು ವಶಕ್ಕೆ ಪಡೆದು ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಅದಲ್ಲದೇ ಗುಂಡ್ಲುಪೇಟೆ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕ ಎನ್.ಜಯ ಕುಮಾರ್ ರವರಿಗೆ ದೊರೆತ ಖಚಿತ ಮಾಹಿತಿ ಮೇರೆಗೆ, ಠಾಣಾ ಸಿಬ್ಬಂದಿಗಳಿಗೆ ನೀಡಿದ ಸೂಚನೆ ಮೇರೆಗೆ ಠಾಣಾ ವ್ಯಾಪ್ತಿಯ ಮಹದೇವಪ್ರಸಾದ್ ನಗರದ ನಿವೇಶನ ಸಂಖ್ಯೆ: 425 ರಲ್ಲಿ ದಾಳಿ ಮಾಡಿ ಅಕ್ರಮವಾಗಿ ಸಂಗ್ರಹಣೆ ಮಾಡಿದ್ದ 32 ಕ್ವಿಂಟಾಲ್ (3200 ಕೆಜಿ) ಪಡಿತರ ಅಕ್ಕಿಯನ್ನು ವಶಕ್ಕೆ ಪಡೆದು ನಿವೇಶನ ಸಂಖ್ಯೆ: 425 ರ ಮಾಲೀಕನ ಮೇಲೆ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

## ನಿರಂತರ ಅಧ್ಯಯನದಿಂದ ಯಶಸ್ಸು ನಮ್ಮದಾಗುತ್ತದೆ



ಚಾಮರಾಜನಗರ: ನಿರಂತರ ಅಧ್ಯಯನ ಹಾಗೂ ಉಪನ್ಯಾಸಕರ ಮಾರ್ಗ ದರ್ಶನದಿಂದ ಜೆಇಇಯಂತಹ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಸಾದ್ಯವಿದೆ ಎಂದು ಮಲೆಯೂರಿನ ಎಂ.ಜಿ. ನಾಗದೇವ್ ತಿಳಿಸಿದರು.

ತಾಲೂಕಿನ ಮಲೆಯೂರಿನ ಸ್ವಗೃಹದಲ್ಲಿ ದುಗ್ಗಹಟ್ಟಿ ರಾಜೇಶ್ ಗೆಳೆಯರ ಬಳಗ, ಚಾಮರಾಜನಗರ ಬಸವ ಕೇಂದ್ರ ಹಾಗೂ ಗೂಳಿ ಗ್ರೂಪ್ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಬಾಲ್ಯದಿಂದಲೂ ನನಗೆ ಏನನ್ನಾದರೂ ಸಾಧಿಸಬೇಕೆಂಬ ಛಲ ಇತ್ತು. ಇದಕ್ಕೆ ಪೂರಕವಾಗಿ ನನ್ನ ತಂದೆ ತಾಯಿ ಗುರುಗಳು ಮಾರ್ಗದರ್ಶನ ನೀಡಿದರು ಅದು ಇಂದು ಸಾರ್ಥಕವಾಗಿದೆ ಎಂದರು. ಮುಂದೆ ದೇಶದ ಪ್ರಸಿದ್ಧ ಐಐಟಿಯಲ್ಲಿ ಶಿಕ್ಷಣ ಮುಂದುವರಿಸಿ ಒಳ್ಳೆಯ ಜ್ಞಾನ ಸಂಪಾದಿಸಿ ಉದ್ಯೋಗದ ಜೊತೆ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕೆಂದರು.

ದಾನಿಗಳಾದ ದುಗ್ಗಹಟ್ಟಿ ರಾಜೇಶ್ ಮಾತನಾಡಿ, ಎಂಜಿ ನಾಗದೇವ ಪ್ರತಿಷ್ಠಿತ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿರುವ ಮಲೆಯೂರು ಗ್ರಾಮದ ಗುರುಸ್ವಾಮಿ ಮತ್ತು ನೇತ್ರಾವತಿಯವರ ಸುಪುತ್ರನಾಗಿದ್ದಾನೆ. ಜೆ ಇ ಇ ಪರೀಕ್ಷೆಯಲ್ಲಿ ದೇಶಕ್ಕೆ ಮೊದಲ ರಾಂಕ್ ಪಡೆದಿರುವ ಈತ ತನ್ನ ಶಿಕ್ಷಣವನ್ನು ಮೈಸೂರು ಹಾಗೂ ಕಾರ್ಕಳದ ಕ್ರಿಯೇಟಿವ್ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದು ಇತ್ತೀಚೆಗೆ ನಡೆದ ಸಿ ಇ ಟಿ ಪರೀಕ್ಷೆಯಲ್ಲೂ 28ನೇ ರಾಂಕ್ ಪಡೆದಿದ್ದಾನೆ . ಮುಂದಿನ ದಿನಗಳಲ್ಲೂ ಕಠಿಣ ಶ್ರಮ ವಹಿಸಿ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡುವಂತಾಗಲಿ ಎಂದರು. ಚಾಮರಾಜನಗರದ ಎಂಸಿಎಸ್ ಪ್ರೌಢಶಾಲಾ ಮುಖ್ಯ ಶಿಕ್ಷಕ ಹೆಗ್ಗವಾಡಿಪುರ ಮಹದೇವಸ್ವಾಮಿ ಮಾತನಾಡಿ,ಯುವಕರು ಶ್ರದ್ಧೆ ಛಲ ಪರಿಶ್ರಮ ರೂಢಿಸಿಕೊಂಡು ಗುರಿಯತ್ತ ಸಾಗಿದರೆ ಅಸಾಧ್ಯವಾದುದನ್ನೂ ಸಾಧಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟರು.

ಅವರು ತಾಲೂಕಿನ ಮಲೆಯೂರು ಗ್ರಾಮದ ಜೆಇಇ ಮೇನ್ಸ್ ನ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದು ಜಿಲ್ಲೆಯ ಕೀರ್ತಿ ಎತ್ತಿ ಹಿಡಿದಿದ್ದಾರೆ. ಯುವಕರು ವಿದ್ಯಾರ್ಥಿ ದೆಸೆಯಲ್ಲಿ ಏಕಾಗ್ರತೆ ಬೆಳೆಸಿಕೊಂಡು ಗುರಿಯತ್ತ ಸಾಗಿದರೆ ಏನನ್ನಾದರೂ ಸಾಧಿಸಬಹುದು ಪರಿಶ್ರಮಪಟ್ಟು ಗುರಿಯೆಡೆಗೆ ಸಾಗಲು ಛಲ ಹೊಂದಿದ್ದರೆ ಸಾಧಕರಾಗಬಹುದು ಎಂದರು.

ಹಿರಿಯ ಸಹಕಾರಿ ಧುರೀಣ ಕೋಡಿಮೋಳೆ ರಾಜಶೇಖರ್ ಮಾತನಾಡಿ, ಶಿಕ್ಷಣ ಇಂದು ಸ್ಪರ್ಧಾತ್ಮಕವಾಗಿದ್ದು ಉದ್ಯೋಗ ಕೇಂದ್ರೀಕೃತವಾಗುತ್ತಿದೆ. ಹೀಗಾಗಿ ಪರಿಶ್ರಮವೇ ವಿದ್ಯಾರ್ಥಿ ಯಶಸ್ಸಿನ ಗುಟ್ಟಾಗಿದೆ .ಈ ನಿಟ್ಟಿನಲ್ಲಿ ತಾಲೂಕಿನ ಹೆಮ್ಮೆಯ ಪುತ್ರ ನಾಗದೇವ ಜೆ ಇ ಇ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದಿದ್ದು ತಾಲೂಕು ಜಿಲ್ಲೆ ಹಾಗೂ ರಾಜ್ಯಕ್ಕೆ ಹೆಸರು ತಂದಿದ್ದಾನೆ ಈತನ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು. ಮುಂದಿನ ದಿನಗಳಲ್ಲಿ ಮತ್ತಷ್ಟು ಸ್ಪರ್ಧಾತ್ಮಕ ಪರೀಕೆ ಎದುರಿಸಿ ರಾಷ್ಟ್ರದಲ್ಲಿ ಉನ್ನತ ಸ್ಥಾನ ಗಳಿಸಲಿ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಅವರ ಭವಿಷ್ಯಕ್ಕೆ ಮಾರ್ಗದರ್ಶನ ನೀಡುವಂತೆ ಸಲಹೆ ನೀಡಿದರು

ಸುತ್ತೂರು ಶಾಲೆಯಲ್ಲಿ ಶಿಕ್ಷಕಿಯಾಗಿರುವ ತಾಯಿ ಎ ಸಿ ನೇತಾವತಿ ಮಾತನಾಡಿ, ನಮ್ಮ ಪುತ್ರ ಮೊಬೈಲ್ ಮತ್ತು ಟಿವಿಯಿಂದ ದೂರವಿದ್ದು, ಕೆಲ ಕಾಲ ಹೈಸ್ಕೂಲ್ ಹಂತದಲ್ಲಿ ಕ್ರೀಡಾ ಚಟುವಟಿಕೆಗಳಲ್ಲೂ ಭಾಗವಹಿಸುತ್ತಾ ಉತ್ತಮ ಅಂಕಗಳಿಸುತ್ತಿದ್ದ. ಪಿಯುಸಿ ಹಂತದಲ್ಲಿ ಸಂಪೂರ್ಣ ಓದಿನಕಡೆ ಗಮನಹರಿಸಿದ್ದರಿಂದ ಜೆಇಇ ಪರೀಕ್ಷೆಯಲ್ಲಿ ರಾಷ್ಟ್ರದ ಗಮನಸೆಳೆಯುವ ಸಾಧನೆ ಮಾಡಿದ್ದಾನೆ ಎಂದರು. ನಾಗದೇವ್ ತಂದೆ ಗುರುಸ್ವಾಮಿ, ಬಸವಕೇಂದ್ರದ ಅಧ್ಯಕ್ಷ ಎನ್ ರಿಚ್ ಮಹದೇವಸ್ವಾಮಿ, ದಾನಿಗಳಾದ ದುಗ್ಗಹಟ್ಟಿ ರಾಜೇಶ್,ಜಿಲ್ಲಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ, ಪತ್ರಕರ್ತ ಗೂಳೀಪುರ ನಂದೀಶ್, ಸೋಮವಾರಪೇಟೆ ಗೌ.ಸೋಮಣ್ಣ, ಲಕ್ಷ್ಮಿಪುರ ಮುಖ್ಯಶಿಕ್ಷಕ ಮೂಕಳ್ಳಿಬಸವಣ್ಣ, ವಿಸಿ ಹೊಸೂರು ನಟೇಶ್, ಬೆಂಡರವಾಡಿ ಮಹೇಶ್ ಪಟೇಲ್, ಗೂಳೀಪುರ ಬಾಬು, ಸೇರಿದಂತೆ ಇತರರು ಹಾಜರಿದ್ದರು.

# ಬೆಂಗಳೂರು ದೇಶದಲೇ ವಿಶೇಷ

## ಹೆಚ್.ಡಿ.ಕೋಟೆಯಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ



ಎಚ್.ಡಿ.ಕೋಟೆ: ನಾಡಪ್ರಭು ಕೆಂಪೇ ಗೌಡರು ದೂರದೃಷ್ಟಿಯಿಂದ ಕಟ್ಟಿದ ಬೆಂದಕಾಳೂರು ಇಂದು ಜಾಗತಿಕ ಮಟ್ಟದಲ್ಲಿ ಸಿಲಿಕಾನ್ ಸಿಟಿ, ಉದ್ಯಾನ ನಗರಿಯಾಗಿ ಹೊರಹೊಮ್ಮಿದೆ. ಕರ್ನಾಟಕದ ರಾಜಧಾನಿ ಮಾತ್ರವಲ್ಲದೆ ತಂತ್ರಜ್ಞಾನ ಕ್ಷೇತ್ರದಲ್ಲಿ ಜಗತ್ತಿನ ಗಮನ ಸೆಳೆದಿರುವ ಬೆಂಗಳೂರು, ಇಂದು ಇಡೀ ದೇಶವೇ ತನ್ನತ್ತ ತಿರುಗಿ ನೋಡುವಂತಹ ವಿಶೇಷ ಸ್ಥಾನ ಪಡೆದಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲಾಗಿದ್ದ 'ನಾಡಪ್ರಭು ಕೆಂಪೇಗೌಡ ಅವರ 517ನೇ ಜಯಂತ್ಯುತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರಮುಖ ನಗರಗಳಲ್ಲಿ ಒಂದಾಗಿ ಬೆಳೆದಿರುವ ಬೆಂಗಳೂರು, ಲಕ್ಷಾಂತರ ಯುವಕರಿಗೆ ಉದ್ಯೋಗದ ಆಸರೆಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಎಸ್.ಪಿ. ಪ್ರಕಾಶ್ ಅವರು ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಸಾಧನೆಗಳ ಕುರಿತು ವಿಶೇಷ ವಿಚಾರ ಮಂಡನೆ ಮಾಡಿದರು. ವೇದಿಕೆಯಲ್ಲಿ ತಹಶೀಲ್ದಾರ್ ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ ಡಾ. ಟಿ. ರವಿಕುಮಾರ್, ಇಒ ರವಿಚಂದ್ರ, ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಮುಖಂಡರಾದ ಕೃಷ್ಣೇಗೌಡ, ಶಂಭೇಗೌಡ, ಸುರೇಂದ್ರೇಗೌಡ, ಬಾಲಕೃಷ್ಣ ಸೇರಿದಂತೆ ಒಕ್ಕಲಿಗ ಸಮುದಾಯದ ಪ್ರಮುಖರು ಹಾಗೂ ವಿವಿಧ ಇಲಾಖೆಯ

### ಒಕ್ಕಲಿಗ ನಾಯಕರ ಕೊಡುಗೆ ಅನನ್ಯ

ಮೈಮುಲ್ ಮಾಜಿ ಅಧ್ಯಕ್ಷ ಕೆ. ಈರೇಗೌಡ ಮಾತನಾಡಿ, ಜಾತ್ಯತೀತವಾಗಿ ಎಲ್ಲ ಜನಾಂಗಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಕೆಂಪೇಗೌಡರು ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ. ನಾಡಿನ ಪ್ರಗತಿಗೆ ಕೆಂಗಲ್ ಹನುಮಂತಯ್ಯ, ಎಸ್.ಎಂ. ಕೃಷ್ಣ, ಎಚ್.ಡಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಒಕ್ಕಲಿಗ ಸಮುದಾಯದ ನಾಯಕರ ಕೊಡುಗೆ ಅನನ್ಯ ಎಂದರು. ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ಹರೀಶ್ ಗೌಡ ಮಾತನಾಡಿ, ಕಳೆದ 15 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕೆಂಪೇಗೌಡ ಭವನ ನಿರ್ಮಾಣಕ್ಕೆ ಶಾಸಕರು ತಕ್ಷಣ ಜಾಗ ಒದಿಸಬೇಕು ಹಾಗೂ ತಾಲೂಕಿನ ಯುವಕರ ಜೀವನೋಪಾಯಕ್ಕಾಗಿ ಒಂದೆರಡು ಕಾರ್ಖಾನೆಗಳನ್ನು ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

### ಕೆಂಪೇಗೌಡ ಭವನಕ್ಕೆ ಬದಲಿ ಜಾಗದ ಭರವಸೆ

ತಮ್ಮ ತಂದೆ ದಿವಂಗತ ಎಸ್. ಚಿಕ್ಕಮಾದು ಅವರು ಶಾಸಕರಾಗಲು ಒಕ್ಕಲಿಗ ಸಮುದಾಯದ ಕೊಡುಗೆ ಅಪಾರವಾಗಿದ್ದು, ತಾವು ತಾಲೂಕಿನಲ್ಲಿ ರಾಜಕಾರಣ ಮಾಡದೆ ಸದಾ ಜನಸೇವೆಯನ್ನೇ ಮಾಡುತ್ತಿರುವುದಾಗಿ ಶಾಸಕರು ನುಡಿದರು. ಒಕ್ಕಲಿಗ ಸಮುದಾಯದ ಧೀಮಂತ ನಾಯಕರು ವಿಧಾನಸೌಧ ಹಾಗೂ ಸುವರ್ಣಸೌಧದಂತಹ ಐತಿಹಾಸಿಕ ಕಟ್ಟಡಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ತಾಲೂಕು ಕೇಂದ್ರದಲ್ಲಿ ಕೆಂಪೇಗೌಡರ ಭವನ ನಿರ್ಮಾಣಕ್ಕಾಗಿ ಈ ಹಿಂದೆ ಸಂತೆಮಾಳದಲ್ಲಿ 32 ಗುಂಟೆ ಜಾಗ ನೀಡುವುದಾಗಿ ಘೋಷಿಸಲಾಗಿತ್ತು. ಆದರೆ, ಅಲ್ಲಿ ಕೆಲವು ತಾಂತ್ರಿಕ ಮತ್ತು ದಾಖಲೆಗಳ ಸಮಸ್ಯೆ ಇರುವುದರಿಂದ, ಶೀಘ್ರದಲ್ಲೇ ಬೇರೆಡೆ ಸುಸಜ್ಜಿತ ಜಾಗವನ್ನು ಮಂಜೂರು ಮಾಡಿಕೊಡುವುದಾಗಿ ಸಮುದಾಯದ ಮುಖಂಡರಿಗೆ ಭರವಸೆ ನೀಡಿದರು.

### ಕೆಂಪೇಗೌಡರು ಜಾತಿ, ಊರಿಗೆ ಸೀಮಿತವಲ್ಲ: ಶ್ರೀವತ್ಸ

ಮೈಸೂರು: ಕೆಂಪೇಗೌಡರು ಒಂದು ಸಮುದಾಯಕ್ಕೆ ಮತ್ತು ಧರ್ಮಕ್ಕೆ ಮಾತ್ರ ಸೀಮಿತವಾಗದೆ, ಇಡೀ ಸಮಾಜವನ್ನು ಅಭಿವೃದ್ಧಿ ದೃಷ್ಟಿಯಿಂದ ಮುನ್ನಡೆಸಿದವರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಕೆಂಪೇಗೌಡ ಅಭಿಮಾನಿ ಬಳಗದ ವತಿಯಿಂದ ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಜೀವದಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ದಾನಿಗಳಿಗೆ ಪ್ರಮಾಣ ಪತ್ರ ನೀಡಿ ಮಾತನಾಡಿದರು. ಕೆಂಪೇಗೌಡರು ಒಕ್ಕಲಿಗ ಸಮುದಾಯದ ಪ್ರಭುಗಳಾಗಿದ್ದರೂ ಸಹ ಒಂದೇ ಸಮುದಾಯಕ್ಕೆ ಸೀಮೀತವಾದವರಲ್ಲ ಎಂಬುದಕ್ಕೆ ಅವರು ಕಟ್ಟಿದ ಬೆಂಗಳೂರು ನಗರವೇ ಸಾಕ್ಷಿ. ಪ್ರತಿಯೊಂದು ಸಮುದಾಯದ ಜನರಿಗೂ ಒಂದೊಂದು ಕೇರಿಯನ್ನು ಸಮುದಾಯದ ಹೆಸರಿನಲ್ಲೇ ಕಟ್ಟಿಕೊಟಿದ್ದಾರೆ'

ಅವರ ಆಡಳಿತ ಇತರರಿಗೆ ಮಾದರಿಯಾಗಿದ್ದನ್ನು ಇತಿಹಾಸದ ಪುಟದಲ್ಲಿ ಕಾಣಬಹುದು ಎಂದರು.

ಇದೇ ಸಂದರ್ಭದಲ್ಲಿ ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ಜಯ ಕರ್ನಾಟಕ ಸಂಘದ ನಗರಾಧ್ಯಕ್ಷ ಶ್ರೀಹರ್ಷ, ಕಿರಣ್ ಗೌಡ, ವಾಣೀಶ್, ಪ್ರದೀಪ್ ಕುಮಾರ್, ಆರ್‌ಎಂಪಿ ಸತೀಶ್, ಪ್ರಭು ಇನ್ನಿತರರು ಹಾಜರಿದ್ದರು.



# ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿಪೂಜೆ



ಗುಂಡ್ಲುಪೇಟೆ: ತಾಲ್ಲೂಕಿನ ಹಸಗೂಲಿ ಗ್ರಾಮದಲ್ಲಿ ಪುರಾತನ ಕಾಲದ ರಾಮೇಶ್ವರ ದೇವಸ್ಥಾನ ಕೆಡವಿ ನೂತನ ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿಪೂಜೆ ಮಾಡಲಾಯಿತು ಸೋಮಹಳ್ಳಿ ಮಠದ ಸಿದ್ದಮಲ್ಲ ಸ್ವಾಮಿಗಳು, ಮೂಡಗೂರು ಮಠದ ಇಮ್ಮಡಿ ಉದ್ದಾನಸ್ವಾಮಿಗಳು ಗುದ್ದಲಿಪೂಜೆ ನೆರವೇರಿಸಿದರು.

ಈ ದೇವಸ್ಥಾನವು ನೂರಾರು ವರ್ಷಗಳ ಹಿಂದಿನ ಕಾಲದ ದೇವಾಲಯವಾಗಿತ್ತು ಕಲ್ಲಿನಿಂದ ನಿರ್ಮಾಣ ಮಾಡಲಾಗಿದ್ದ ದೇವಸ್ಥಾನ ಶಿಥಿಲಾವಸ್ಥೆಯತ್ತ ಸಾಗಿತ್ತು ಗ್ರಾಮಸ್ಥರು ನೂತನ ದೇವಾಲಯ ನಿರ್ಮಾಣಕ್ಕೆ ಚಿಂತಿಸಿ ಹಳೆ ದೇವಸ್ಥಾನ ಕೆಡವಿ ನೂತನ ದೇವಸ್ಥಾನ ನಿರ್ಮಾಣ ಮಾಡಲು ಗುದ್ದಲಿಪೂಜೆ ನೆರವೇರಿತು. ಈ ಸಂದರ್ಭದಲ್ಲಿ ಗ್ರಾಮದ ಅಲ್ಲಹಳ್ಳಿ ಪಾರ್ವತಾಂಭೆ ಸಮಿತಿ, ಗ್ರಾಮದ ಹಿರಿಯ ಕಿರಿಯ ಮುಖಂಡರು ಗ್ರಾಮಸ್ಥರು ಭಾಗಿಯಾಗಿದ್ದರು.

# ಅಪ್ರಾಪ್ತೆ ಮದುವೆಗೆ ತಡೆ

ಚಾಮರಾಜನಗರ, ನಾನು ಅಪ್ರಾಪ್ತೆಯಾಗಿದ್ದು, ನನಗೆ ಮದುವೆ ಮಾಡಲಾಗುತ್ತಿದೆ ಎಂದು ಬಾಲಕಿಯೊಬ್ಬಳು ಮಕ್ಕಳ ಸಹಾಯವಾಣಿಗೆ ಕರೆ ಮಾಡಿದ್ದು, ಆಕೆಯನ್ನು ರಕ್ಷಣೆ ಮಾಡಲಾಗಿದೆ.

ಗುಂಡ್ಲುಪೇಟೆ ತಾಲೂಕಿನ ಮಳವಳ್ಳಿ ಗ್ರಾಮದ ಅಪ್ರಾಪ್ತ ಬಾಲಕಿಯನ್ನು, ಶಿವಪುರ ಗ್ರಾಮದ ಯುವಕನೊಬ್ಬನಿಗೆ ಮದುವೆ ಮಾಡಲು ನಿಶ್ಚಯ ಮಾಡಿಕೊಂಡಿದ್ದರು. ಬಾಲಕಿಯು ಏಳು ದಿನಗಳಿಂದ ಯುವಕನ ತೋಟದ ಮನೆಯಲ್ಲಿ ವಾಸವಿದ್ದಳು. ಈ ವೇಳೆ ಬಾಲಕಿ ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ಕರೆ ಮಾಡಿ "ನಾನು ಅಪ್ರಾಪ್ತೆ ಆಗಿದ್ದು, ನನಗೆ ಇಲ್ಲಿ ತೊಂದರೆಯಾಗುತ್ತಿದೆ" ಎಂದು ತಿಳಿಸಿರುತ್ತಾರೆ.

ಅದರಂತೆ ತಾಲೂಕಿನ ಶಿವಪುರ ಗ್ರಾಮ ಪಂಚಾಯಿತಿ ಪಿಡಿಒ ಶಿಲ್ಪಾ ಅವರ ದೂರಿನ ಮೇರೆಗೆ ಪೊಲೀಸರು ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಶಿವಪುರ ಗ್ರಾಮದ ತೋಟದ ಮನೆಗೆ ಹೋಗಿ ಪರಿಶೀಲಿಸಿ ಬಾಲಕಿಯನ್ನು ರಕ್ಷಣೆ ಮಾಡಿದ್ದಾರೆ. ಬಳಿಕ ಅಪ್ರಾಪ್ತ ಬಾಲಕಿಯನ್ನು ಬಾಲ ಮಂದಿರಕ್ಕೆ ಕಳುಹಿಸಿಕೊಡಲಾಗಿದೆ ಎಂದು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮಾಹಿತಿ ನೀಡಿದರು.



ಜಿಲ್ಲೆಯಲ್ಲಿ ಬಾಲ್ಯ ವಿವಾಹ ಇಂದಿಗೂ ಅವ್ಯಾಹತವಾಗಿ ನಡೆಯುತ್ತಿದೆ ಎಂಬುದಕ್ಕೆ ಈ ಪ್ರಕರಣ ಉದಾಹರಣೆಯಾಗಿದ್ದು, ಬಾಲ್ಯ ವಿವಾಹವನ್ನು ನಿಯಂತ್ರಿಸಲು ಹಾಗೂ ಅಪ್ರಾಪ್ತ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಲು ಮಕ್ಕಳ ಸಹಾಯವಾಣಿ ಅತ್ಯಂತ ಸಹಕಾರಿಯಾಗಿದೆ.

## ಆತಂಕದಲ್ಲಿ ವಕೀಲರು ಹಾಗೂ ಸಾರ್ವಜನಿಕರು

# ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ: ಸೂಕ್ತ ತನಿಖೆಗೆ ವಕೀಲರ ಒತ್ತಾಯ



ಚಾಮರಾಜನಗರ, ನಗರದ ಜಿಲ್ಲಾ ನ್ಯಾಯಾಲಯಕ್ಕೆ ಮತ್ತೊಮ್ಮೆ ಬಾಂಬ್ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ದ ಕ್ರಮ ಕೈಗೊಳ್ಳುವಂತೆ ವಕೀಕಲರು ಒತ್ತಾಯಿಸಿದ್ದಾರೆ.

ಜಿಲ್ಲಾ ನ್ಯಾಯಾಲಯಕ್ಕೆ ಮತ್ತೊಮ್ಮೆ ಕಿಡಿಗೇಡಿಗಳು ಬಾಂಬ್ ಬೆದರಿಕೆ ಇ–ಮೇಲ್ ಸಂದೇಶವನ್ನು ಕಳುಹಿಸಿದ್ದು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಚಾಮರಾಜನಗರ ಜಿಲ್ಲಾ ಸತ್ರ ಮತ್ತು ಪ್ರಧಾನ ನ್ಯಾಯಾಲಯಕ್ಕೆ ಡಾರ್ಕ್ ವೆಬ್ ಮೂಲಕ ಇ–ಮೇಲ್ ಕಳುಹಿಸಲಾಗಿದ್ದು, ಅದರಲ್ಲಿ 'ತಮಿಳುನಾಡು ಮಾಜಿ ಸಿಎಂ ಸ್ಟಾಲಿನ್ ಪತ್ನಿ ದುರ್ಗಾ ಸ್ಟಾಲಿನ್ ಪ್ರವಾದಿ ಮಹಮ್ಮದ್ ಗೆ ಅಪಮಾನ ಮಾಡಿದ್ದು, ಚಾಮರಾಜನಗರ ಕೋರ್ಟ್ ರಸ್ತೆಯಲ್ಲಿ 3 ಸಿಲಿಕಾನ್ ಬಾಂಬ್, ನ್ಯಾಯಾಲಯದ ರೆಕಾರ್ಡ್ ರೂಂ ನಲ್ಲಿ 3 ಹಾಗೂ ಇ–ಸೇವಾ ಕೇಂದ್ರದಲ್ಲಿ 2 ಬಾಂಬ್ ಇಡಲಾಗಿದೆ. ಶನಿವಾರ ಮಧ್ಯಾಹ್ನ 2:25ಕ್ಕೆ ಸ್ಫೋಟಗೊಳ್ಳಲಿವೆ' ಎಂದು ಇ–ಮೇಲ್ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇ–ಮೇಲ್ ಬಂದ ಮಾಹಿತಿ ಅರಿತು, ನ್ಯಾಯಾಲಯದ ಸಿಬ್ಬಂದಿ, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದರು. ಈ ವೇಳೆ ಎಲ್ಲರನ್ನೂ ನ್ಯಾಯಾಲಯದಿಂದ ಹೊರಗೆ ಕಳುಹಿಸಿ ಜಿಲ್ಲಾ ಪೊಲೀಸರು ಬಾಂಬ್ ನಿಷ್ಕ್ರಿಯ ದಳ ಮತ್ತು ಡಾಗ್ ಸ್ಕ್ವಾಡ್‌ಗಳ ಮೂಲಕ ಪರಿಶೀಲನೆ ನಡೆಸಿದ್ದಾರೆ.

**ಎರಡು ದಿನಗಳ ಹಿಂದೆಯೂ ಬಾಂಬ್ ಇಟ್ಟಿರುವ ಬೆದರಿಕೆ**

ಕಳೆದ ಎರಡು ದಿನಗಳ ಹಿಂದೆಯೂ ಕೂಡ ಇದೇ ನ್ಯಾಯಾಲಯಕ್ಕೆ ಅಜ್ಮಲ್ ಕಸಬ್ ಎಂಬಾತನ ಹೆಸರಿನಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಇಂದು ಮತ್ತೊಮ್ಮೆ ಅದೇ ರೀತಿಯ ಬೆದರಿಕೆಯ ಸಂದೇಶ ಬಂದಿದೆ.

**ಕೋರ್ಟ್ ಸಮಯ ವ್ಯರ್ಥ**

ಈ ಕುರಿತು ವಕೀಲ ಪ್ರಸನ್ನಕುಮಾರ್ ಮಾತನಾಡಿ, ಕೆಲ ಕಿಡಿಗೇಡಿಗಳು ನ್ಯಾಯಾಂಗ ವ್ಯವಸ್ಥೆಯನ್ನೇ ಗುರಿಯಾಗಿಸಿ ಬಾಂಬ್ ಬೆದರಿಕೆ ಕಳುಹಿಸುತ್ತಿದ್ದಾದೆ. ಎರಡು ದಿನದ ಅಂತರದಲ್ಲಿ ಎರಡನೇ ಬಾರಿ ಇ–ಮೇಲ್ ಸಂದೇಶ ಬಂದಿದ್ದು ನ್ಯಾಯಾಧೀಶರು, ವಕೀಲರು, ಕಕ್ಷಿದಾರರು ಆತಂಕದಲ್ಲಿದ್ದಾರೆ. ಕಲಾಪಗಳು ನಡೆಯದಿರುವುದರಿಂದ ಸಮಯ ವ್ಯರ್ಥವಾಗಿದೆ. ಕಕ್ಷಿದಾರರು ದೂರದ ಊರುಗಳಿಂದ ಬಂದಿದ್ದಾರೆ ಎಂದು ಹೇಳಿದರು.ಚಾಮರಾಜನಗರ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರ ಮೇಲ್ ಐಡಿಗೆ ಇವತ್ತೊಂದು ಕ್ರಿಯೇಟೆಡ್ ಮೇಲ್ ನಿಂದ ನ್ಯಾಯಾಲಯದಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಸಂದೇಶ ಬಂದಿದೆ. ಹೀಗಾಗಿ ಬಾಂಬ್ ಸ್ಕ್ವಾಡ್ ನವರು, ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ಮೊನ್ನೆ 24ನೇ ತಾರಿಕು ಇದೇ ರೀತಿ ಸಂದೇಶ ಬಂದಿತ್ತು, ತಪಾಸಣೆ ನಡೆಸಿದಾಗ ಅದೊಂದು ಹುಸಿ ಬಾಂಬ್ ಕರೆ ಅಂತಾ ಗೊತ್ತಾಯ್ತು. ಈ ಹಿಂದೆ ಒಂದೂವರೆ ತಿಂಗಳ ಹಿಂದೆ ಮೈಸೂರಿನ ನ್ಯಾಯಾಲಯಕ್ಕೂ ಬಾಂಬ್ ಹಾಕಿದ್ದೇವೆ ಅಂತಾ ಸಂದೇಶ ಬಂದಿತ್ತು. ಅಲ್ಲೂ ಸಹ ನ್ಯಾಯಾಧೀಶರನ್ನು, ಕೋರ್ಟ್ ಸಿಬ್ಬಂದಿಯನ್ನು, ಲಾಯರ್ಸ್ ಅನ್ನು ಹೊರಗೆ ಕಳಹಿಸಿ ಪೊಲೀಸರು ತಪಾಸಣೆ ಮಾಡಿದ್ದರು. ಬಳ್ಳಾರಿ, ತುಮಕೂರು, ಶಿವಮೊಗ್ಗದಲ್ಲೂ ಹೀಗೆ ಆಗಿತ್ತು. ಬೆಂಗಳೂರಿನಲ್ಲೂ ಸಹ ಇದೇ ತರ ಮಾಡಿದ್ದರು ಎಂದು ಅವರು ತಿಳಿಸಿದರು.

ಕೋರ್ಟ್‌ಗಳನ್ನು ಗುರಿಯಾಗಿಸಿಕೊಂಡು ಈ ರೀತಿ ಸಂದೇಶ ಕಳಿಸುವ ಮೂಲಕ ಸಾರ್ವಜನಿಕರನ್ನು ಭಯ ಬೀಳಿಸುವ ಕೆಲಸ ನಡೀತಿದೆ ಎಂದು ಪರೋಕ್ಷವಾಗಿ ಇದು ಉಗ್ರಗಾಮಿ ಕೃತ್ಯ. ಹಾಗಾಗಿ ಇದರ ಬಗ್ಗೆ ' ಸರ್ಕಾರ, ಪರಿಶೀಲನೆ ಮಾಡಬೇಕು. ಸ್ಪೆಷಲ್ ಟೀಂ ಮಾಡಿ ತನಿಖೆಗೆ ವಹಿಸಬೇಕು ಮತ್ತು ಕಠಿಣ ಕ್ರಮ

# ಮಡಿವಾಳ ಸಂಘದ ನೂತನ ಅಧ್ಯಕ್ಷರಾಗಿ ಸತ್ಯನಾರಾಯಣ



ಮೈಸೂರು : ಕರ್ನಾಟಕ ರಾಜ್ಯ ಮಡಿವಾಳ ಸೇವಾ ಸಂಘದ ನೂತನ ಅಧ್ಯಕ್ಷರಾಗಿ ಸತ್ಯನಾರಾಯಣ ಅವಿರೋಧವಾಗಿ ಆಯ್ಕೆಯಾದರು.

ಶನಿವಾರ ಬೆಳಗ್ಗೆ ಜಲದರ್ಶಿನಿ ಅತಿಥಿಗೃಹದ ಸಭಾಂಗಣದಲ್ಲಿ ನಡೆದ ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳ ಮಡಿವಾಳ ಸಂಘಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಸತ್ಯನಾರಾಯಣ ಅವರನ್ನು ಕರ್ನಾಟಕ ರಾಜ್ಯ ಮಡಿವಾಳ ಸೇವಾ ಸಂಘದ ರಾಜ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಮಡಿವಾಳ ಸಂಘದ ಗೌರವ ಕಾರ್ಯದರ್ಶಿ ಬಿ.ಜಿ.ಕೇಶವ ಮಾತನಾಡಿ, ಈಗಾಗಲೇ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ರಾಜ್ಯಮಟ್ಟದ ಮಡಿವಾಳ ಸಂಘಗಳ ಅಧ್ಯಕ್ಷರುಗಳು ಮಡಿವಾಳ ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಿಫಲರಾಗಿದ್ದು, ಕೇವಲ ತಮ್ಮಗಳ ಸ್ವಾರ್ಥಕ್ಕಾಗಿ ಲೆಟರ್‌ಹೆಡ್‌ಗಳಿಗೆ ಮಾತ್ರ ಅಧ್ಯಕ್ಷರಾಗಿ ಸೀಮಿತವಾಗಿದ್ದಾರೆ. ಇಡೀ ರಾಜ್ಯದಲ್ಲಿ ಇಂದು ಮಡಿವಾಳ ಸಮುದಾಯದವರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ತುಳಿತಕ್ಕೆ ಒಳಗಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿರಂತರ ಶೋಷಣೆಗೆ ಒಳಗಾಗುತ್ತಿದ್ದಾರೆ. ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ ಮತ್ತು ವಿಶೇಷವಾಗಿ ಮಹಿಳೆಯರಿಗೆ ಸಮರ್ಪಕವಾಗಿ ಸರ್ಕಾರದ ಸವಲತ್ತುಗಳು ದೊರಕುತ್ತಿಲ್ಲ, ಈ ಕಾರಣದಿಂದ ರಾಜ್ಯಮಟ್ಟದ ಈ ಸಂಘಟನೆಯನ್ನು ನೂತನವಾಗಿ ಅಸ್ತಿತ್ವಕ್ಕೆ ತರಲಾಗಿದೆ. ಮೈಸೂರಿನಲ್ಲಿಯೇ ಇದರ ಕೇಂದ್ರ ಕಚೇರಿ ಇರಲಿದ್ದು, ಈ ಭಾಗದ ಮಡಿವಾಳ ಸಮುದಾಯದ ಕ್ಷೇಮಾಭಿವೃದ್ಧಿಗೆ ಈ ಸಂಘಟನೆ ಕಂಕಣಬದ್ಧವಾಗಿ ಕೆಲಸ ಮಾಡುತ್ತದೆ ಎಂದರು.

ಇದೇ ವೇಳೆ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ತಾಲ್ಲೂಕುಗಳಿಂದ ಬಂದ ಮಡಿವಾಳ ಸಮುದಾಯದ ಮುಖಂಡರು ಸಭೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮೈಸೂರು ಜಿಲ್ಲಾ ಮಡಿವಾಳ ಸಂಘದ ಗೌರವಾಧ್ಯಕ್ಷ ಬಿ.ಜಿ.ಕೇಶವ, ಮೈಸೂರು ಜಿಲ್ಲಾ ಕಾರ್ಯದರ್ಶಿ ಕೆಂಪಶೆಟ್ಟಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಧ್ಯಕ್ಷರಾದ ಶಿವಕುಮಾರ್, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಪ್ರಿಯಾ ರಮೇಶ್, ಮಡಿವಾಳ ಸಮುದಾಯದ ಹಿರಿಯ ಮುಖಂಡರಾದ ರವಿನಂದನ, ತಿ.ನರಸೀಪುರ ರಾಜು, ಕೆ.ಆರ್.ನಗರ ತಾಲ್ಲೂಕು ಅಧ್ಯಕ್ಷರಾದ ಸಿದ್ದನಕೊಪ್ಪಲು ಕುಮಾರ್, ಟೌನ್ ಅಧ್ಯಕ್ಷ ಕಟ್ಟೆ ಕುಮಾರ್, ಜಿಲ್ಲಾ ಉಪಾಧ್ಯಕ್ಷರಾದ ಬಿಎಸ್‌ಎನ್‌ಎಲ್ ಕೃಷ್ಣ ಸಾಲಿಗ್ರಾಮ ತಾಲ್ಲೂಕು ಅಧ್ಯಕ್ಷರಾದ ಹರ್ಷವರ್ಧನ್, ಹುಣಸೂರು ತಾಲ್ಲೂಕು ಅಧ್ಯಕ್ಷರಾದ ರವಿ ಚಿಲ್ಕುಂದ, ಕಾರ್ಯದರ್ಶಿ ರಘು ಹೊಸರಾಮನಹಳ್ಳಿ, ನಂಜನಗೂಡು ತಾಲ್ಲೂಕು ಅಧ್ಯಕ್ಷರಾದ ಡಾ.ಚಂದ್ರು, ಕಾರ್ಯದರ್ಶಿ ಕೆಂಬಾಲ್ ಶ್ರೀರಾಮು, ಉಪಾಧ್ಯಕ್ಷರಾದ ಸ್ವಾಮಿ ಅಡಕನಹಳ್ಳಿ ಹುಂಡಿ, ಗೌರವಾಧ್ಯಕ್ಷರಾದ ಮರುವಿನಹಳ್ಳಿ ಮಹದೇವಶೆಟ್ಟಿ, ತಿ.ನರಸೀಪುರದ ತಾಲ್ಲೂಕು ಅಧ್ಯಕ್ಷರಾದ ರವಿ, ಮಹಿಳಾ ತಾಲ್ಲೂಕು ಅಧ್ಯಕ್ಷರಾದ ಮಂಗಳ, ಮೈಸೂರು ನಗರ ಅಧ್ಯಕ್ಷರಾದ ಜಗದೀಶ್ ಕುಮಾರ್, ಪಿರಿಯಾಪಟ್ಟಣ ತಾಲ್ಲೂಕು ಮುಖಂಡರಾದ ಕೋಣಸೂರು ಮಹದೇವ, ಜಿಲ್ಲಾ ನಿರ್ದೇಶಕರಾದ ರಾಂಪುರ ಮಹೇಶ್ ಇತರರು ಇದ್ದರು.

## ವ್ಯಾಸರಾಜ ಮಠಕ್ಕೆ ಉತ್ತರಾಧಿಕಾರಿಯಾಗಿ ಶ್ರೀ ವಿದ್ಯಾವಿಜಯ ತೀರ್ಥ ಸ್ವಾಮೀಜಿ

ಮೈಸೂರು: ಮೈಸೂರಿನ ಶ್ರೀ ಸೋಸಲೇ ವ್ಯಾಸ ರಾಜ ಮಠಕ್ಕೆ ಉತ್ತರಾಧಿಕಾರಿಯಾಗಿ ಶ್ರೀ ವಿದ್ಯಾವಿಜಯ ತೀರ್ಥ ಸ್ವಾಮೀಜಿರನ್ನು ನೇಮಕ ಮಾಡಬೇಕು ಎಂದು ಶ್ರೀ ವ್ಯಾಸ ರಾಜ ಸೇವಾ ಸಮಿತಿ ಒತ್ತಾಯಿಸಿದರು.

800 ವರ್ಷಗಳ ಇತಿಹಾಸ ಮಠದಲ್ಲಿ ಹಲವು ವರ್ಷಗಳಿಂದ ಉತ್ತರಾಧಿಕಾರಿ ಇಲ್ಲದೇ ಮಠದ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು, ಭಕ್ತರಲ್ಲಿ ತೀವ್ರ ನಿರಾಸೆ ಉಂಟಾಗಿದೆ. ಈ ಹಿನ್ನಲೆಯಲ್ಲಿ ಉತ್ತರಾಧಿಕಾರಿಯಾಗಿ ಘೋಷಣೆಯಾಗಿರುವ ಶ್ರೀ ವಿದ್ಯಾ ವಿಜಯತೀರ್ಥ ಸ್ವಾಮೀಜಿರನ್ನು ಮಠದ ಉತ್ತರಾಧಿಕಾರಿಯಾಗಿ ನೇಮಕ ಮಾಡಬೇಕು ಎಂದು ಸಮಿತಿಯ ಸದಸ್ಯ ಹಾಗೂ ಮಠದ ಭಕ್ತ ಕೆ.ವೇಣುಗೋಪಾಲ್ ಒತ್ತಾಯಿಸಿದರು. ಮಠದ ಪರಂಪರೆಯಲ್ಲಿ ಹಿಂದೆ ಯಾವುದೇ ಪೀಠಾಽಪತಿಗಳು ನ್ಯಾಯಲಯಕ್ಕಾಗಲಿ ಅಥವಾ ಅದರ ಆದೇಶಗಳಿಗಾಗಲಿ ಅಗೌರವ ತೋರಿಸಿರುವ ಉದಾಹರಣೆಗಳಿಲ್ಲ. ಮಠದ ಉತ್ತರಾಽಕಾರಿಯಾಗಿ ವಿದ್ಯಾ ವಿಜಯ ತೀರ್ಥರನ್ನು ನೇಮಕ ಮಾಡುವುದಾಗಿ ಮಠದ ಶ್ರೀಗಳಾದ ವಿದ್ಯಾಶ್ರೀಶ ತೀರ್ಥರು, 9 ವರ್ಷ ಕಳೆದರೂ ವಿದ್ಯಾ ವಿಜಯ ತೀರ್ಥರನ್ನು ಮಠದ ಉತ್ತರಾಽಕಾರಿಯಾಗಿ ನೇಮಕ ಮಾಡದೇ ನಿರ್ಲಕ್ಷ ವಹಿಸಿದ್ದಾರೆ, ಇದರಿಂದ ಮಠದ ಪರಂಪರೆಯೊಂದಿಗೆ ಮಠದ ಭಕ್ತರಿಗೆ ನೋವಾಗಿದೆ, ಈ ಬಗ್ಗೆ ಮಠದ ಭಕ್ತರು ಶ್ರೀಗಳಿಗೆ ಪತ್ರ ಬರೆದು ಉತ್ತರಾಽಕಾರಿ ನೇಮಕ ಪಕ್ರಿಯೆಯನ್ನು ಪೂರ್ಣಗೊಳಿಸುವಂತೆ ಮನವಿ ಮಾಡಿದ್ದಾರೆ. ಆದರೆ, ಶ್ರೀಗಳು ಯಾವುದೇ ಕ್ರಮ ವಹಿಸದೇ ನಿರ್ಲಕ್ಷವಹಿಸಿದ್ದಾರೆ"ಎಂದು ದೂರಿದರು. ಮಠದ ಉತ್ತರಾಧಿಯಾಗಿ ವಿದ್ಯಾವಿಜಯ ತೀರ್ಥರನ್ನು ನೇಮಕ ಮಾಡದೇ ಇದ್ದರೆ ಮಠದ ಭಕ್ತರ ಪರವಾಗಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮುರಳೀಧರ್, ನರಸಿಂಹನ್ ಇದ್ದರು.




# 51ನೇ ವರ್ಷದ ಕರಾಳ ದಿನಾಚರಣೆ

ಗುಂಡ್ಲುಪೇಟೆ: ಭಾರತೀಯ ಜನತಾ ಪಕ್ಷ ತಾಲೂಕು ಮಂಡಲ ಘಟಕದ ವತಿಯಿಂದ ಪಕ್ಷದ ಕಾರ್ಯಾಲಯದಲ್ಲಿ ಕಾಂಗ್ರೆಸ್ ಸರ್ಕಾರ ಹೇರಿದ್ದ ತುರ್ತು ಪರಿಸ್ಥಿತಿಯ (ಎಮರ್ಜೆನ್ಸಿ) 51ನೇ ವರ್ಷದ ಕರಾಳ ದಿನಾಚರಣೆ ಕಾರ್ಯಕ್ರಮವನ್ನು ಶನಿವಾರ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ನವೀನ್ ಮೌರ್ಯ ಅವರು, 1975ರ ಜೂನ್ 25ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದ ಬಳಿಕ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆಯುಂಟಾಯಿತು. ನಾಗರಿಕರ ಮೂಲಭೂತ ಹಕ್ಕುಗಳಿಗೆ ನಿರ್ಬಂಧ ಹೇರಲಾಯಿತು, ವಿರೋಧ ಪಕ್ಷದ ಅನೇಕ ನಾಯಕರು ಬಂಧನಕ್ಕೊಳಗಾದರು ಹಾಗೂ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಸೆನ್ಸಾರ್ ವಿಧಿಸಿ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಸಲಾಯಿತು ಎಂದು ಆರೋಪಿಸಿದರು.

ಆ ಕಾಲಘಟ್ಟದಲ್ಲಿ ಅನೇಕ ರಾಜಕೀಯ ನಾಯಕರು, ಸಮಾಜಸೇವಕರು ಹಾಗೂ ಸಾಮಾನ್ಯ ನಾಗರಿಕರು ಪ್ರಜಾಪ್ರಭುತ್ವದ ಮೌಲ್ಯಗಳನ್ನು




ಉಳಿಸಿಕೊಳ್ಳಲು ಹೋರಾಟ ನಡೆಸಿದ್ದು, ಅವರ ತ್ಯಾಗ ಮತ್ತು ಧೈರ್ಯವನ್ನು ಸದಾ ಗೌರವದಿಂದ ಸ್ಮರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್, ಮಂಡಲ ಅಧ್ಯಕ್ಷ ಮಹದೇವಪ್ರಸಾದ್ ಸಿ, ಮಂಡಲ ಪ್ರಭಾರಿ ಸುಂದರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಕೆರೇಹಳ್ಳಿ ಮಹದೇವಸ್ವಾಮಿ, ಜಿಡಿಎಲ್ ಸುರೇಶ್, ಜಿಲ್ಲಾ ಉಪಾಧ್ಯಕ್ಷ ಕಣ್ಣೆಗಾಲ ಸ್ವಾಮಿ, ಎಸ್ಸಿ ಮೋರ್ಚಾ ಮಂಡಲ ಅಧ್ಯಕ್ಷ ನಾಗುಸ್ವಾಮಿ, ಮಹಾಶಕ್ತಿ ಕೇಂದ್ರ, ಶಕ್ತಿಕೇಂದ್ರ, ಬೂತ್ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು ಹಾಜರಿದ್ದರು

# ಗ್ರಾಮಗಳ ಅಭಿವೃದ್ದಿಗೆ ಆದ್ಯತೆ



ಚಾಮರಾಜನಗರ. ತಾಲ್ಲೂಕಿನ ಪುಣಜನೂರು ಗ್ರಾ.ಪಂ ವ್ಯಾಪ್ತಿಯ ಭಾನವಾಡಿ ಗ್ರಾಮದಲ್ಲಿ ಟಿ.ಎಸ್.ಪಿ ಯೋಜನೆ ಅನುದಾನ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಎಂಎಸ್‌ಐಎಲ್ ನಿಗಮದ ಅಧ್ಯಕ್ಷ, ಶಾಸಕ ಸಿ.ಪುಟ್ಟರಮಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು ಈ ?ರವ್ಯಾಪ್ತಿಯ ಗ್ರಾಮಗಳಿಗೆ ಬೇಕಾದ ರಸ್ತೆ,ಚರಂಡಿ, ಸಮುದಾಯಭವನ, ಕುಡಿಯುವ ನೀರಿನ ಸೌಲಭ್ಯ, ಗಂಗಾ ಕಲ್ಯಾಣ ಯೋಜನೆಯಡಿ ಸಾಲಸೌಲಭ್ಯ ವಿತರಣೆ, ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ, ನಿವೇಶನ, ಸೇರಿದಂತೆ ಸರಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಒದಗಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ರಸ್ತೆ, ಚರಂಡಿಯಿಲ್ಲದಿರುವ ಗ್ರಾಮಗಳನ್ನು ಗುರುತಿಸಿ, ಸರಕಾರದಿಂದ ಸೂಕ್ತ ಅನುದಾನ ಬಿಡುಗಡೆ ಮಾಡಿಸಿ, ಅಭಿವೃದ್ದಿ ಪಡಿಸಲಾಗುವುದು ಎಂದು ತಿಳಿಸಿದರು.

ಸಂಬಂಧಪಟ್ಟ ಗುತ್ತಿಗೆದಾರರು, ಎಂಜಿನಿಯರ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕರು ಸೂಚಿಸಿದರು. ಈ ಸಂದರ್ಭದಲ್ಲಿ ಪಿಎಸಿಸಿ ಅಧ್ಯಕ್ಷ ಮಣ ನಾಯಕ, ತಾ.ಪಂ ಮಾಜಿ ಸದಸ್ಯ ಪಿ.ಕುಮಾರ್‌ನಾಯಕ್, ಗ್ರಾ.ಪಂ ಮಾಜಿ ಉಪಾಧ್ಯಕ್ಷರಾದ ಷಮೀರ್ ಪಾಷ, ಶಿವನಾಯಕ, ರಾಚಪ್ಪ, ಮುಖಂಡರಾದ ಜಡಯಪ್ಪ, ನಿಂಗಪ್ಪ, ಉಲ್ಲೇಶ್‌ನಾಯಕ್, ಮೂಡಳ್ಳಿ ಶಂಕರ್, ಶಿವಣ್ಣ, ಮಹದೇವನಾಯಕ್, ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

# ಕೆರೆ ತುಂಬಿಸಲು ಶಾಸಕರು ವಿಫಲ

## ಗಣೇಶ್ ಪ್ರಸಾದ್ ವಿರುದ್ದ ಮಾಜಿ ಶಾಸಕ ನಿರಂಜನಕುಮಾರ್ ವಾಗ್ದಾಳಿ

ಗುಂಡ್ಲುಪೇಟೆ: ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವಲ್ಲಿ ಹಾಗೂ ಕ್ಷೇತ್ರದಾದ್ಯಂತ ಮಿತಿಮೀರಿರುವ ಅಕ್ರಮ ಲಾಟರಿ ಮಾರಾಟ, ಭ್ರಷ್ಟಾಚಾರವನ್ನು ತಡೆಯುವಲ್ಲಿ ಸ್ಥಳೀಯ ಶಾಸಕ ಎಚ್.ಎಂ. ಗಣೇಶಪ್ರಸಾದ್ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಮಾಜಿ ಶಾಸಕ ಸಿ.ಎಸ್. ನಿರಂಜನಕುಮಾರ್ ತೀವ್ರವಾಗಿ ಆರೋಪಿಸಿದರು. ಪಟ್ಟಣದ ಸಿ.ಎಂ.ಎಸ್. ಕಲಾ ಮಂದಿರದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿ ಶಾಸಕರ ಉದಾಸೀನ ಧೋರಣೆಯಿಂದಾಗಿ ತಾಲೂಕಿನ ಸಾರ್ವಜನಿಕರು ಹಾಗೂ ರೈತರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ ಎಂದು ಆಕ್ರೋಶ ಹೊರಹಾಕಿದರು.

### ಕೆರೆಗಳಿಗೆ ನೀರು ಹರಿಸದ ಶಾಸಕರ 'ನಾಟಕ'

ತಾಲೂಕಿನ ಕೆರೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ರೈತರು ಹಾಗೂ ವಿವಿಧ ಸಂಘಟನೆಗಳು ಸತತ 45 ದಿನಗಳ ಕಾಲ ಧರಣಿ ನಡೆಸಿದ್ದವು. ಈ ಪ್ರತಿಭಟನೆಯಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಮೈಸೂರು ಸಂಸದರು ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಎರಡು ತಿಂಗಳೊಳಗೆ ಕೆರೆಗಳಿಗೆ ನೀರು ಹರಿಸುವುದಾಗಿ ಶಾಸಕರು ಭರವಸೆ ನೀಡಿದ್ದರು. ಆದರೆ, ಆ ಭರವಸೆ ನೀಡಿ ವರ್ಷ ಕಳೆದರೂ ಕೆರೆಗಳಿಗೆ ನೀರು ಹರಿದಿಲ್ಲ. ಕೇವಲ ಕೆಲವೇ ದಿನಗಳ ಕಾಲ ನೀರು ಬಿಟ್ಟು ತದನಂತರ ಸ್ಥಗಿತಗೊಳಿಸಿರುವುದು ಶಾಸಕರ ಕಣ್ಣೊರೆಸುವ ತಂತ್ರ ಮತ್ತು ನಾಟಕವಾಗಿದೆ ಎಂದು ಟೀಕಿಸಿದರು. ಬಿಜೆಪಿ ಆಡಳಿತಾವಧಿಯಲ್ಲಿ ತಾಲೂಕಿನ ಕೆರೆಗಳಿಗೆ ನೀರು ತುಂಬಿಸಿ ರೈತರ ಕೈಹಿಡಿಯಲಾಗಿತ್ತು. ಆದರೆ ಈಗಿನ ಶಾಸಕರು ಅಧಿಕಾರದ ಅಹಂಕಾರದಲ್ಲಿದ್ದು, ರೈತರ ಸಮಸ್ಯೆಗಳನ್ನು ಆಲಿಸುತ್ತಿಲ್ಲ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಸಿ. ಮಹದೇವಪ್ರಸಾದ್, ಪ್ರಮುಖರಾದ ಕಣ್ಣೇಗಾಲ ಸ್ವಾಮಿ (ಮಾದಪ್ಪ), ಪುರಸಭೆ ಮಾಜಿ ಅಧ್ಯಕ್ಷ ಜಿ.ಡಿ.ಎಲ್. ಸುರೇಶ್, ಮಾಜಿ ಸದಸ್ಯ ನಾಗೇಶ್, ಎಸ್ಸಿ ಟಿಂಡಿಣುಬಿ ಜಿಲ್ಲಾಧ್ಯಕ್ಷ ಡಾ. ನವೀನ್ ಮೌರ್ಯ, ಮಲ್ಲಿಕಾರ್ಜುನಸ್ವಾಮಿ, ಕಬ್ಬಹಳ್ಳಿ ರೇವಣ್ಣ, ಪ್ರಧಾನ ಕಾರ್ಯದರ್ಶಿ ಸುನೀಲ್ ಮೂಡ್ಲು, ಮಹೇಂದ್ರ ಗರಗನಹಳ್ಳಿ, ನಮ್ಮೋ ಮಂಜು ಶಿವಪುರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



### ಮಿತಿಮೀರಿದ ಭ್ರಷ್ಟಾಚಾರ, ಅಕ್ರಮ ದಂಧೆಗಳು

ಗುಂಡ್ಲುಪೇಟೆ ತಾಲೂಕಿನಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಸಾಮಾನ್ಯ ಜನರಿಗೆ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡಿಸಿಕೊಳ್ಳುವುದು ದುಸ್ತರವಾಗಿದೆ. ಡ್ರಗ್ಸ್, ಅಕ್ರಮ ಲಾಟರಿ ಜಾಲ ಹಾಗೂ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಕಳ್ಳಸಂತೆಯಲ್ಲಿ ಮಾರಾಟ ಮಾಡುವ ದೊಡ್ಡ ಮಾಫಿಯಾವೇ ತಾಲೂಕಿನಲ್ಲಿ ಸಕ್ರಿಯವಾಗಿದೆ. ಇದನ್ನು ತಡೆಯುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಪ್ರತಿದಿನ ನೂರಾರು ಲಾರಿಗಳಲ್ಲಿ ಕೇರಳಕ್ಕೆ ಅಕ್ರಮವಾಗಿ ಅಕ್ಕಿ ಸಾಗಣೆಯಾಗುತ್ತಿದ್ದರೂ ಯಾವುದೇ ಕ್ರಮ ಜರುಗಿಸುತ್ತಿಲ್ಲ. ಇದನ್ನು ನೋಡಿದರೆ "ನೀವು ಗುಂಡ್ಲುಪೇಟೆ ಕ್ಷೇತ್ರದ ಶಾಸಕರೋ ಅಥವಾ ಕೇರಳದ ಶಾಸಕರೋ?" ಎಂಬ ಅನುಮಾನ ಕಾಡುತ್ತಿದೆ ಎಂದು ಪ್ರಶ್ನಿಸಿದರು. ಕ್ಷೇತ್ರದ ಕಾಮಗಾರಿಗಳಲ್ಲಿ ಸ್ಥಳೀಯರನ್ನು ಬಿಟ್ಟು ಹೊರಗಿನವರಿಗೆ ಹಾಗೂ ಶಾಸಕರ ಸಂಬಂಧಿಕರಿಗೆ ಆದ್ಯತೆ ನೀಡಲಾಗುತ್ತಿದ್ದು, ಕೂತನೂರು ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ಇನ್ನೂ ಬ್ರೇಕ್ ಬಿದ್ದಿಲ್ಲ ಎಂದು ಆರೋಪಿಸಿದರು.

### ಕುಡಿಯುವ ನೀರಿನ ಸಮಸ್ಯೆ, ಬರ ಘೋಷಣೆಗೆ ಆಗ್ರಹ

ತಾಲೂಕಿನಲ್ಲಿ ವ್ಯಾಪಕ ಮಳೆ ಕೊರತೆಯಿಂದಾಗಿ ಕೊಳವೆಬಾವಿಗಳು ಸಂಪೂರ್ಣವಾಗಿ ಬತ್ತಿ ಹೋಗಿದ್ದು, ಕುಡಿಯುವ ನೀರಿನ ತೀವ್ರ ಅಭಾವ ಸೃಷ್ಟಿಯಾಗಿದೆ. ಸ್ವತಃ ಗುಂಡ್ಲುಪೇಟೆ ಪಟ್ಟಣದಲ್ಲೇ ಕಳೆದ 15 ದಿನಗಳಿಂದ ಸಮರ್ಪಕವಾಗಿ ನೀರು ಸರಬರಾಜಾಗದೆ ಸಾರ್ವಜನಿಕರು ಪರದಾಡುತ್ತಿದ್ದಾರೆ. ತಾಲೂಕು ಬರಪೀಡಿತ ಸ್ಥಿತಿಯಲ್ಲಿದ್ದರೂ ಸರ್ಕಾರ ಇತ್ತ ಗಮನ ಹರಿಸುತ್ತಿಲ್ಲ. ತಕ್ಷಣವೇ ತಾಲೂಕನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದು ಎಕರೆ ಬಾಳೆ ಬೆಳೆಗೆ ?25 ಸಾವಿರ ಪರಿಹಾರ ನೀಡಿದ್ದನ್ನು ಅವರು ಸ್ಮರಿಸಿದರು. ಇದೇ ವೇಳೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಅತ್ಯಂತ ಮಂದಗತಿಯಲ್ಲಿ ಸಾಗುತ್ತಿರುವುದರಿಂದ ಅಪಘಾತಗಳು ಹೆಚ್ಚುತ್ತಿದ್ದು, ತಕ್ಷಣವೇ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಬೇಕು ಎಂದು ಒತ್ತಾಯಿಸಿದರು.

## ಕೆಂಪೇಗೌಡರ 517ನೇ ಜಯಂತಿ



ಮೈಸೂರು: ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಕೆಂಪೇಗೌಡರ ವಂಶಸ್ಥ ಸೋಮಶೇಖರ್ ರನ್ನು ಸನ್ಮಾನಿಸಿ ಗೌರವಿಸಲಾಯಿತು. ಗಾಲ್ಫ್ ಕ್ಲಬ್ ಅಧ್ಯಕ್ಷ ಅರುಣ್ ಕುಮಾರ್, ಕ್ಯಾಪ್ಟನ್ ಯಶ್ವಂತ್, ಮುಖ್ಯ ಆಯೋಜಕ ಎಂ.ಆರ್.ಸೂರ್ಯಕು ಮಾರ್, ಡಾ.ಚಂದನ್ ಹಾಗೂ ಸಮರ್ಥ್ ಪಟೇಲ್ ಇದ್ದರು.



ಮೈಸೂರಿನ ಅಂಬೇಡ್ಕರ್ ಮೊಮ್ಮಗ ಯಶ್ವಂತ್ ಭೀಮರಾವ್ ಅಂಬೇಡ್ಕರ್ ಮೈಸೂರಿಗೆ ಭೇಟಿ ನೀಡಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಿಕ ಅಶೋಕಪುರಂ ವಿಶ್ವ ಮೈತ್ರಿ ಬುದ್ಧ ವಿಹಾರಕ್ಕೆ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಜ್ಞಾನ ಪ್ರಕಾಶ್ ಸ್ವಾಮೀಜಿ, ಬಂತೆಜ್ಞಿ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್, ಸರ್ವೇಶ್, ಇನ್ನಿತರರು ಉಪಸ್ಥಿತರಿದ್ದರು.

# ಬೆಣ್ಣೆಗೆರೆಯಲ್ಲಿ ಹುಲಿದಾಳಿ: ರೈತನಿಗೆ ಗಾಯ

ಸರಗೂರು: ಸಮೀಪದ ಮುಳ್ಳೂರು ಗ್ರಾಮದ ಬೆಣ್ಣೆಗೆರೆ ಸಮೀಪ ಕೃಷಿ ಕಾಯಕದಲ್ಲಿ ನಿರತನಾಗಿದ್ದ ರೈತ ಕಿರಣ್ ಮೇಲೆ ಹುಲಿ ದಾಳಿ ಮಾಡಿ ಗಾಯಗೊಳಿಸಿದೆ.

ಗ್ರಾಮದ ಸ್ನೇಹಿತರ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಬೆಳೆಯಲ್ಲಿ ಎಂದಿನಂತೆ ಐದಾರು ಕೃಷಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಏಕಾಏಕಿ ಬಂದ ವ್ಯಾಘ್ರ ಕಿರಣ್ ಅನ್ನು ಎಳೆದುಕೊಂಡು ಹೋಗಿ, ಉಗುರುಗಳಿಂದ ರೈತನ ಬೆನ್ನಿನ ನಾಲ್ಕೈದು ಭಾಗಗಳಲ್ಲಿ ಕುತ್ತಿಗೆ, ಹೊಟ್ಟೆಯನ್ನು ತೀವ್ರವಾಗಿ ಗಾಯಗೊಳಿಸಿದೆ.

ಹುಲಿ ದಾಳಿಗೆ ರೈತನ ಕಿರುಚಾಟ ಕೇಳಿದ ಸ್ಥಳೀಯ ಜಮೀನನವರು ಬರುತ್ತಿದ್ದಂತೆಯೇ ಹುಲಿ ಕಿರಣ್ ಅವರನ್ನು ಬಿಟ್ಟು ಅಲ್ಲಿಂದ ಕಾಲ್ಕಿದ್ದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಗಾಯಳುವಿನ ನೆರವಿಗೆ ಬಂದ ಸಾರ್ವಜನಿಕರು ಸರಗೂರಿನ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರು. ಸ್ವಾಮಿ ವಿವೇಕಾನಂದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಘಟನೆಯ ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯಾಧಿಕಾರಿಗಳನ್ನು ಗ್ರಾಮಸ್ಥರು ತೀವ್ರ ತರಾಟೆಗೆ ತಗೆದುಕೊಂಡರು.

### ನುಗು ವನ್ಯಜೀವಿ ವ್ಯಾಪ್ತಿ ಮರುಕಳಿಸಿದ ಘಟನೆ



ಜಮೀನಿನಲ್ಲಿ ಟೊಮೆಟೋ ಬೆಳೆಯ ನಾಟಿ ಕಾರ್ಯದಲ್ಲಿ ತೊಡಗಿದ್ದ ವೇಳೆ ಹುಲಿ ಘರ್ಜಿಸಿತ್ತು. ಶಬ್ದ ಕೇಳಿದ ರೈತರಾದ ನಾಗರಾಜು ಹಾಗೂ ರಾಜಶೇಖರ್ ಅಲ್ಲಿಂದ ಕಾಲ್ಕಿತ್ತಿದ್ದರು. ಓಡಲು ಶಕ್ತವಾಗದ ರಾಜಶೇಖರ್(58)ನೆಲಕ್ಕೆ ಬಿದ್ದ ಪರಿಣಾಮ ರಕ್ತ ಹೀರಿದ ಹುಲಿ ರೈತ ರಾಜಶೇಖರ್ ಅವರನ್ನು 2025ರ ಅಕ್ಟೋಬರ್ ನಲ್ಲಿ ಬಲಿ ಪಡೆದಿತ್ತು. ಈ ಘಟನೆ ನಡೆದು ಒಂಬತ್ತು ತಿಂಗಳ ನಂತರ ಇದೀಗ, ಅದೇ ಸ್ಥಳದಲ್ಲಿ ಘಟನೆ ಮರುಕಳಿಸಿರುವುದು ಸುತ್ತಮುತ್ತಲ ಗ್ರಾಮಸ್ಥರನ್ನು ಆತಂಕಕ್ಕೀಡು ಮಾಡಿದೆ. ಶನಿವಾರದ ದುರ್ಘಟನೆಗೂ ಮುನ್ನ ಕೆಲ ದಿನಗಳಲ್ಲಿ ಮುಳ್ಳೂರು ಗ್ರಾಮದ ಒಂದು ಹಸು ಹಾಗೂ ಮೇಕೆಗಳನ್ನೂ ಬಲಿಪಡೆದಿತ್ತಾಗಿ ಗ್ರಾಮಸ್ಥರು ಮಾಹಿತಿ ನೀಡಿದರು. ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸುತ್ತಮುತ್ತಲ ಗ್ರಾಮಸ್ಥರೊಟ್ಟಿಗೆ ಹೋರಾಟ ಮಾಡಲಾಗುವುದು ಎಂದು ಗ್ರಾಮಸ್ಥರಾದ ಎಂ.ಎಸ್.ಸಿದ್ದಾರ್ಥ, ಶ್ರೀಕಂಠ ತಿಳಿಸಿದರು.

# ಕೆಂಪೇಗೌಡರ ಜಯಂತಿ: ರಜೆ ಘೋಷಿಸಿ

**ರಾಮನಗರ:** ನಾಡಪ್ರಭು ಕೆಂಪೇಗೌಡರ ಜಯಂತಿ ದಿನವನ್ನು ಸರ್ಕಾರ ಸಾರ್ವತ್ರಿಕ ರಜೆ ಘೋಷಿಸಬೇಕು. ಹೀಗೆ ರಜೆ ನೀಡುವುದರಿಂದ ವಿದ್ಯಾರ್ಥಿಗಳು, ಹಿರಿ ಯರು ಎಲ್ಲರೂ ಒಗ್ಗೂಡಿ ಬೆಂಗಳೂರು ಕಟ್ಟಿದ ಕೆಂಪೇ ಗೌಡರನ್ನು ಅರ್ಥಪೂರ್ಣವಾಗಿ ಆಚರಿಸಬಹುದು ಎಂದು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ನ ಜಿಲ್ಲಾ ಘಟಕದ ಅಧ್ಯಕ್ಷ ಪಟೇಲ್ ಸಿ ರಾಜು ಅಭಿಪ್ರಾಯಪಟ್ಟರು.




ನಗರದಲ್ಲಿರುವ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ನ ಕಚೇರಿಯಲ್ಲಿ ನಡೆದ ಕೆಂಪೇಗೌಡರ 517ನೇ ಜಯಂತ್ಯೋತ್ಸವ ಆಚರಣೆಯ ವೇಳೆ ಅವರು ಮಾತನಾಡಿದರು. ಕೆಂಪೇಗೌಡರ ಜಯಂತ್ಯೋತ್ಸವವನ್ನು ನಾಡಿನ ನಾಗರೀಕರು ಒಗ್ಗೂಡಿ ಆಚರಿಸುವಂತಹ ಕಾರ್ಯಕ್ರಮಗಳನ್ನು ಜಾರಿಗೊಳಿ ಸಬೇಕು ಎಂದು ಅವರು ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದರು. ಕೆಂಪೇಗೌಡರ ಆದರ್ಶಗಳನ್ನು ನಾಗರಿಕರು ಅಳವಡಿಸಿಕೊಳ್ಳಬೇಕು. ಕೆಂಪೇಗೌಡರನ್ನು ಅಭಿವೃದ್ಧಿಯ ಹರಿಕಾರ ಎಂದೆ ಸ್ಮರಿಸಲಾಗುತ್ತದೆ. ಬೆಂಗಳೂರು ನಿರ್ಮಾಣ ಇದಕ್ಕೆ ಉದಾಹರಣೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಕೆಂಪೇ ಗೌಡರು ಮಾದರಿಯಾಗಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾ ನೇಗಿಲಯೋಗಿ ಪ್ರಧಾನ ಕಾರ್ಯದರ್ಶಿ ತಿಮ್ಮೇಗೌಡ ಮಾತನಾಡಿ, ಕೆಂಪೇಗೌಡರ ನೆನಪು ಉಳಿಯಲು ರಾಮನಗರದಲ್ಲಿ ಯಾವುದಾದರೂ ಒಂದು ರಸ್ತೆಗೆ ಕೆಂಪೇಗೌಡರ ರಸ್ತೆ ಎಂದು ನಾಮಕರಣ ಮಾಡಬೇಕು ಮತ್ತು ಪ್ರತಿವ?ರ್ ಅವರ ಹೆಸರಿನಲ್ಲಿ ದತ್ತಿ ಕಾರ್ಯಕ್ರಮಗಳು ನಡೆಯುವಂತೆ ಕಾರ್ಯಕ್ರಮಗಳು ರೂಪುಗೊಳ್ಳಬೇಕು ಎಂದು ಸ್ಥಳೀಯ ಆಡಳಿತವನ್ನು ಆಗ್ರಹಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ನೇಗಿಲಯೋಗಿ ಪದಾಧಿಕಾರಿಗಳಾದ ಬಿಟಿ ದಿನೇಶ್, ಬಿ ಟಿ ರಾಜೇಂದ್ರ, ಸೋಲಾರ್ ಪುಟ್ಟಪ್ಪ, ಹುಣಸನಹಳ್ಳಿ ನಂಜಪ್ಪ, ವನರಾಜು, ಕಾಳೇಗೌಡ ಶಿವ ದ್ಯಾವೇಗೌಡ, ಜಿಲ್ಲಾ ಉಪಾಧ್ಯಕ್ಷರಾದ ಶಿವಣ್ಣ ಹಾಗೂ ಜಿಲ್ಲಾ ನೇಗಿಲಯೋಗಿ ಮಹಿಳಾ ತಾಲೂಕು ಘಟಕದ ಅಧ್ಯಕ್ಷರಾದ ಮಮತಾ ಮುಂತಾದವರು ಹಾಜರಿದ್ದರ

ವಿವಿಧ ಶಾಲಾ, ಕಾಲೇಜುಗಳಲ್ಲಿ ಆಚರಣೆ

# ಕೆಂಪೇಗೌಡರ ಜಯಂತಿ ಆಚರಣೆ

ರಾಮನಗರ: ನಗರದ ವಿವಿಧ ಶಾಲಾ, ಕಾಲೇಜುಗಳಲ್ಲಿ ಕೆಂಪೇಗೌಡರ 517ನೇ ಜಯಂತ್ಯೋತ್ಸವವನ್ನು ಆಚರಿಸಲಾಯಿತು.

### ಹೋಲಿ ಕ್ರೆಸೆಂಟ್ ಶಾಲೆಯಲ್ಲಿ

ನಗರದ ಹೋಲಿ ಕ್ರೆಸೆಂಟ್ ಶಾಲೆಯಲ್ಲಿ ಆಯೋ ಜನೆಯಾಗಿದ್ದ ಬೆಂಗಳೂರು ನಿರ್ಮಾತೃ ನಾಡ ಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದರ ಮೂಲಕ ಆರಂಭವಾಯಿತು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಅಲ್ತಾಫ್ ಅಹ್ಮದ್ ಮಾತನಾಡಿ, ಕೆಂಪೇಗೌಡ ಅವರ ಇತಿಹಾಸ, ಕೊಡುಗೆಗಳು ಮತ್ತು ಸಾಧನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಸಂಸ್ಥೆಯ ಅಧ್ಯಕ್ಷರಾದ ಡಾ॥ ಶಾಜಿಯಾ ಅವರು ಮಾತನಾಡಿ ನಾಡಪ್ರಭುಕೆಂಪೇಗೌಡ ಒಬ್ಬ ಉತ್ತಮ ದೂರದೃಷ್ಟಿಯ ಆಡಳಿತಗಾರ ಮತ್ತು ಪರಿಸರ ಪ್ರೇಮಿಯಾಗಿದ್ದರು ಎಂದರು.



ಕೆಂಪೇಗೌಡರ ಆದರ್ಶಗಳು ಮತ್ತು ನಾಯಕತ್ವದ ಗುಣಗಳನ್ನು ಇಂದಿನ ಯುವ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರಾದ ಯೇಸುದಾಸ್, ಉಪಪ್ರಾಂಶುಪಾಲರಾದ ಲತಾ ಆನಂದ್ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಈ ವೇಳೆ ಆಡಳಿತ ಮಂಡಳಿ ಮತ್ತು ಬೋಧಕ ವೃಂದದ ಸದಸ್ಯರು ಉಪಸ್ಥಿತರಿದ್ದರು.

### ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ

ನಗರದ ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ಕೆಂಪೇಗೌಡರ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಸಹ ಶಿಕ್ಷಕಿ ವರಲಕ್ಷ್ಮಿ ಅವರು ಕೆಂಪೇಗೌಡರ, ಜೀವನ, ಬೆಂಗಳೂರು ನಿರ್ಮಿಸಿದ ಬಗ್ಗೆ, ಮಾಗಡಿಯಲ್ಲಿ ಅವರ ಕೋಟೆ ನಿರ್ಮಿಸಿರುವುದು ಇತ್ಯಾದಿ ವಿಚಾರಗಳನ್ನು ಮಕ್ಕಳಿಗೆ ತಿಳಿಸಿಕೊಟ್ಟರು.

## ನಾಗಮಂಗಲದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ

# ಕೆಂಪೇಗೌಡರ ಸಾಧನೆ ಇತಿಹಾಸ ಪುಟದಲ್ಲಿ ದಾಖಲು: ಸಚಿವ ಚೆಲುವರಾಯಸ್ವಾಮಿ

**ನಾಗಮಂಗಲ:** ಶ್ರಮ, ಸಾಧನೆ ಹಾಗೂ ದೂರದೃಷ್ಟಿಯಿಂದ ನಾಡು ಕಟ್ಟಿದ ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಆದರ್ಶಗಳು ಇಂದಿನ ಪೀಳಿಗೆಗೂ ಪ್ರೇರಣೆಯಾಗಿವೆ ಎಂದು ಎನ್‌ಡಿಸಿಸಿ ಜಿಲ್ಲಾ ಅಧ್ಯಕ್ಷ ಸಚಿವ ಚೆಲುವರಾಯಸ್ವಾಮಿ ಹೇಳಿದರು.

ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆಂಪೇಗೌಡರು ಬೆಂಗಳೂರು ನಗರ ನಿರ್ಮಾಣದ ಮೂಲಕ ದೂರದೃಷ್ಟಿಯ ಆಡಳಿತಕ್ಕೆ ಮಾದರಿಯಾಗಿದ್ದಾರೆ. ಶ್ರಮ ಮತ್ತು ಸಂಕಲ್ಪ ಇದ್ದರೆ ಯಾವುದೇ ಗುರಿಯನ್ನು ಸಾಧಿಸಲು ಸಾಧ್ಯ ಎಂಬುದನ್ನು ಅವರ ಜೀವನ ತೋರಿಸಿಕೊಟ್ಟಿದೆ ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಆದರ್ಶ್ ಮಾತನಾಡಿ, ಕೆಂಪೇಗೌಡರ ಸಾಧನೆ ಮತ್ತು ಬೆಂಗಳೂರು ನಿರ್ಮಾಣದಲ್ಲಿ ಅವರ ಕೊಡುಗೆ ಕುರಿತು ವಿವರಿಸಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಡಾ. ಆದಿತ್ಯ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಧನಂಜಯ್, ಸಮಗ್ರ ಕೃಷಿಕ ಪರಮೇಶ್, ಕೈಗಾರಿಕಾ ಅಧಿಕಾರಿ ದಂಡಿಗನಹಳ್ಳಿ ಜಗದೀಶ್, ಯಕ್ಷಗಾನ ಕಲಾವಿದ ಬೆಳ್ಳೂರು ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು.

ಕೆಂಪೇಗೌಡರ ಕುರಿತು ಕಿತ್ತೂರು ಚನ್ನಮ್ಮ ಶಾಲೆಯ ಪ್ರಾಂಶುಪಾಲೆ ಅನಿತಾ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಂ.ಪ್ರಕಾಶ್, ಕಾರ್ಯನಿರ್ವಾಹಕ ಅಧಿಕಾರಿ ಸತೀಶ್ ಕುಮಾರ್, ವೈದ್ಯಾಧಿಕಾರಿ ನಾರಾಯಣ್, ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್, ಪುರಸಭೆ ಸದಸ್ಯೆ ವೀಣಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಿವಣ್ಣಗೌಡ ನಿರೂಪಿಸಿದರು.

# ಜನಪರ ಆಡಳಿತಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ದೊರೆ

**ರಾಮನಗರ:** ಬೆಂಗಳೂರು ನಿರ್ಮಾಣದ ಜೊತೆಗೆ ವ್ಯಾಪಾರ, ಕೃಷಿ ಹಾಗೂ ಜನಪರ ಆಡಳಿತಕ್ಕೆ ಭದ್ರ ಬುನಾದಿ ಹಾಕಿದ ದೂರದೃಷ್ಟಿಯ ನಾಯಕ ನಾಡಪ್ರಭು ಕೆಂಪೇಗೌಡರು ಎಂದು ಮಾಜಿ ಶಾಸಕ ಕೆ. ರಾಜು ಹೇಳಿದರು.

ರಾಮನಗರ ತಾಲೂಕು ಒಕ್ಕಲಿಗರ ಸಂಘದ ವತಿಯಿಂದ ತಾಲೂಕು ಆಡಳಿತ ಸೌಧದ ಮುಂಭಾಗದಲ್ಲಿರುವ ಒಕ್ಕಲಿಗರ ಸಂಘದ ಕಚೇರಿ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯನ್ನು ಶನಿವಾರ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ರಾಜು, ಕೆಂಪೇಗೌಡರು ಕನಸುಗಾರ, ದಕ್ಷ ಆಡಳಿತಗಾರ ಹಾಗೂ ಸಮಾಜಮುಖಿ ನಾಯಕರು. ಅವರು ನಿರ್ಮಿಸಿದ ಬೆಂಗಳೂರು ಇಂದು ದೇಶ–ವಿದೇಶಗಳಲ್ಲಿ ಖ್ಯಾತಿ ಪಡೆದಿರುವುದು ಅವರ ದೂರದೃಷ್ಟಿಯ ಫಲವಾಗಿದೆ. ಅವರ



ಆದರ್ಶಗಳು ಇಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಿವೆ ಎಂದು ಹೇಳಿದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೇರಿ ಶಿವಲಿಂಗಪ್ಪ ಮಾತನಾಡಿ, ಕೆಂಪೇಗೌಡರು ಕೆರೆಗಳು, ಉದ್ಯಾನಗಳು, ಕಾಲುವೆಗಳು ಸೇರಿದಂತೆ ಪರಿಸರ ಸಂರಕ್ಷಣೆಗೆ ನೀಡಿದ ಕೊಡುಗೆ ಅಪಾರವಾಗಿದೆ. ಜನಪರ ಆಡಳಿತ ಹಾಗೂ ಅಭಿವೃದ್ಧಿಯ ಮೂಲಕ ಅವರು ಶಾಶ್ವತವಾಗಿ ಜನಮನದಲ್ಲಿ ಉಳಿದಿದ್ದಾರೆ ಎಂದು ತಿಳಿಸಿದರು.

ಜಯಂತಿ ಅಂಗವಾಗಿ ಸುಮಾರು 500ಕ್ಕೂ ಹೆಚ್ಚು ಮಂದಿಗೆ ಉಪಾಹಾರ ಹಾಗೂ ಸಿಹಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರಮೇಶ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಚೂಡಲಿಂಗೇಶ್ವರ, ಉಪಾಧ್ಯಕ್ಷ ಚನ್ನಮಾನಹಳ್ಳಿ ರೇವಲಿಂಗಯ್ಯ (ಅಪ್ಪಾಜಣ್ಣ), ಕಾರ್ಯದರ್ಶಿ ಮರಿಸ್ವಾಮಯ್ಯ, ಸಹ ಕಾರ್ಯದರ್ಶಿ ಮಾಯಗಾನಹಳ್ಳಿ ಎಂ. ರೇವಣ್ಣ ಹಾಗೂ ಸಂಘದ ಪದಾಧಿಕಾರಿಗಳು, ಮುಖಂಡರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಅಭಿವೃದ್ಧಿಗೆ ಶ್ರಮಿಸಿದ ದೂರದೃಷ್ಟಿಯ ಆಡಳಿತಗಾರ



**ಕೋಲಾರ:** ಕೋಲಾರದ ರೈತರು ಹಾಗೂ ಒಕ್ಕಲಿಗ ಸಮುದಾಯದವರು ರಾಜ್ಯಕ್ಕೆ ಮಾದರಿಯಾಗಿದ್ದು, ಇಲ್ಲಿ ಆಯೋಜಿಸಿರುವ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಆಚರಣೆ ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಎಂದು ಚಿಕ್ಕಬಳ್ಳಾಪುರ ಶಾಖಾ ಮಠದ ಶ್ರೀಮಂಗಳಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆ ಮುಂಭಾಗದಲ್ಲಿ ಜಿಲ್ಲಾ ಒಕ್ಕಲಿಗರ ಸಂಘ ಹಾಗೂ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಹಾಗೂ ಹಿರಿಯ ವಕೀಲ ಕೆ.ವಿ.ಶಂಕರಪ್ಪ ಮಾತನಾಡಿ, ಕೆಂಪೇಗೌಡರು ಕೇವಲ ಒಂದು ಸಮುದಾಯಕ್ಕೆ ಸೀಮಿತರಾಗಿರಲಿಲ್ಲ. ಎಲ್ಲ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ ದೂರದೃಷ್ಟಿಯ ಆಡಳಿತಗಾರರಾಗಿದ್ದು, ಅವರ ಆದರ್ಶಗಳು ಸಮಾಜಕ್ಕೆ ಸದಾ ಮಾರ್ಗದರ್ಶಿಯಾಗಿವೆ ಎಂದರು.

ಕಾರ್ಯಕ್ರಮದ ಬಳಿಕ ಹಸಿರು ನಿಶಾನೆ ತೋರಿಸುವ ಮೂಲಕ ಭವ್ಯ ಮೆರವಣಿಗೆಗೆ ಚಾಲನೆ ನೀಡಲಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ರೈತರ ನೃತ್ಯ, ಡೊಳ್ಳು ಕುಣಿತ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯಿತು. ಹಾಸನ ಜಿಲ್ಲೆಯ ಅರಸೀಕೆರೆಯಿಂದ ಆಗಮಿಸಿದ್ದ ರೈತರ ಕಲಾತಂಡದ ಸಾಂಪ್ರದಾಯಿಕ ನೃತ್ಯ ವಿಶೇಷ ಆಕರ್ಷಣೆಯಾಗಿತ್ತು.

ಮೆರವಣಿಗೆ ಮಾರ್ಗದುದ್ದಕ್ಕೂ ಅನ್ನದಾನ, ಮಜ್ಜಿಗೆ ಹಾಗೂ ಪಾನಕ ವಿತರಣೆ ನಡೆಯಿತು. ಸಾಂಪ್ರದಾಯಿಕ ಎತ್ತಿನಗಾಡಿಗಳ ಪ್ರದರ್ಶನವೂ ಉತ್ಸವದ ವಿಶೇಷವಾಗಿತ್ತು. ಹೆಚ್ಚಿನ ಜನಸಂದಣಿಯಿಂದ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿದ್ದು, ವಾಹನಗಳನ್ನು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಲು ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಶಾಸಕ ಕೊತ್ತೂರು ಮಂಜುನಾಥ್, ಮಾಜಿ ಸಚಿವ ಕೆ.ಶ್ರೀನಿವಾಸಗೌಡ, ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್‌ಕುಮಾರ್, ಮಾಜಿ ಸದಸ್ಯ ಇಂಚರ ಗೋವಿಂದರಾಜು, ಡಿಜಿಪಿ ಡಿ.ದೇವರಾಜ್, ಜಿಲ್ಲಾ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಬಿಸಪ್ಪಗೌಡ, ಸಿಂಡಿಕೇಟ್ ಸದಸ್ಯ ಸೀಸಂದ್ರ ಗೋಪಾಲಗೌಡ, ಉಪವಿಭಾಗಾಧಿಕಾರಿ ರೇಣುಕಾ ಪ್ರಸಾದ್ ಜಂಬಗಿ, ತಹಸೀಲ್ದಾರ್ ಶ್ರೀನಿವಾಸ್ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಕೇಂಪೇಗೌಡರ ಆದರ್ಶ ಯುವಜನತೆ ಅಳವಡಿಸಿಕೊಳ್ಳಲಿ

**ಕೋಲಾರ:** ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ, ಆಡಳಿತ ಕೌಶಲ್ಯ ಹಾಗೂ ಅಭಿವೃದ್ಧಿ ಪರಿಕಲ್ಪನೆಗಳನ್ನು ಇಂದಿನ ರಾಜಕಾರಣಿಗಳು ಮತ್ತು ಯುವಜನತೆ ಅಳವಡಿಸಿಕೊಳ್ಳಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಚಿಕ್ಕಬಳ್ಳಾಪುರ ಶಾಖಾ ಮಠದ ಶ್ರೀ ಮಂಗಳನಾಥ ಸ್ವಾಮೀಜಿ ಹೇಳಿದರು.

ತಾಲೂಕಿನ ವೇಮಗಲ್ ಪಟ್ಟಣದಲ್ಲಿ ಶನಿವಾರ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಂಪೇಗೌಡರು 500 ವರ್ಷಗಳ ಹಿಂದೆಯೇ ದೂರದೃಷ್ಟಿಯೊಂದಿಗೆ ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಿದ ಮಹಾನ್ ನಾಯಕರು. ಅವರ ಆಡಳಿತ, ಸೇವಾ ಮನೋಭಾವ ಮತ್ತು ಅಭಿವೃದ್ಧಿ ಚಿಂತನೆ ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಬೆಂಗಳೂರು ನಗರ ಬೆಳವಣಿಗೆಗೆ ಕೆಂಪೇಗೌಡರ ಕೊಡುಗೆ ಅಪಾರವಾಗಿದೆ. ಅವರ ಆದರ್ಶಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಶಾಸಕ ಕೊತ್ತೂರು ಮಂಜುನಾಥ್ ಮಾತನಾಡಿ, ಕೆಂಪೇಗೌಡರು ಯಾವುದೇ ಜಾತಿ–ಧರ್ಮದ ಭೇದವಿಲ್ಲದೆ ಎಲ್ಲರ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ವ್ಯಕ್ತಿ. ಜಯಂತಿ ಆಚರಣೆ ಕೇವಲ ಆಚರಣೆಯಾಗದೆ, ಅವರ ಆದರ್ಶಗಳನ್ನು ಜೀವನದಲ್ಲಿ ಅನುಸರಿಸುವ ಸಂಕಲ್ಪವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್‌ಕುಮಾರ್, ನಿವೃತ್ತ ಡಿಜಿಪಿ ಡಿ.ದೇವರಾಜು, ಮಾಜಿ ಸಭಾಪತಿ ವಿ.ಆರ್.ಸುದರ್ಶನ, ವೇಮಗಲ್ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಅನುಷಾ, ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್, ಮುಖ್ಯಾಧಿಕಾರಿ ವೆಂಕಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷೆ ಕುಕ್ಕಿ ರಾಜೇಶ್ವರಿ, ಜೆಡಿಎಸ್ ಮುಖಂಡ ಸಿಎನ್‌ಆರ್ ಶ್ರೀನಾಥ್, ರಾಜ್ಯ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ವಕ್ಕಲೇರಿ ರಾಮು, ಜಿಲ್ಲಾ ಉಪಾಧ್ಯಕ್ಷ ವಿ.ಕೃಷ್ಣಾರೆಡ್ಡಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಖಾಜಿಪಾಳ್ಯ ಮುನಿರಾಜು, ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಊರಟ ಅಗ್ರಹಾರ ಚೌಡರೆಡ್ಡಿ, ಕೋಮುಲ್ ನಿರ್ದೇಶಕ ಚಂಜಿಮಲೆ ರಮೇಶ್, ಸಿಂಡಿಕೇಟ್ ಸದಸ್ಯ ಸೀಸಂದ್ರ ಗೋಪಾಲಗೌಡ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ವೈ. ಶಿವಕುಮಾರ್, ತಾಲೂಕು ಅಧ್ಯಕ್ಷ ಮುನಿಯಪ್ಪ, ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



# ಭಾರತೀಯ ಪರಂಪರೆಯಲ್ಲಿ ಯೋಗ



ವೀಣಾ ಹೇಮಂತ್‌ಗೌಡ ಪಾಟೀಲ್

ಇಡೀ ಜಗತ್ತು ಅಂತರಾಷ್ಟ್ರೀಯ ಯೋಗ ದಿನವನ್ನು ಜೂನ್ 21ರಂದು ಆಚರಿಸುತ್ತಿರುವಾಗ ಯೋಗದ ಪಿತಾಮಹ ಪತಂಜಲಿ ಮಹರ್ಷಿಯ ಜನ್ಮಭೂಮಿ ಭಾರತ ದೇಶದಲ್ಲಿ ಯೋಗದ ಹುಟ್ಟು ಬೆಳವಣಿಗೆ ಹಾಗೂ ನಡೆದು ಬಂದ ದಾರಿಯನ್ನು ತುಸು ಅವಲೋಕಿಸೋಣ.

ಯೋಗವು ಸುಮಾರು 5000 ವರ್ಷಗಳಷ್ಟು ಪುರಾತನವಾದ ಒಂದು ಆಯುರ್ವೇದ ವಿಜ್ಞಾನ ಎಂದು ಪರಿಗಣಿತವಾಗಿದೆ. ಇದೊಂದು ಮನೋದೈಹಿಕ ವಿಜ್ಞಾನ ಯೋಗದ ಮೂಲಕ ನಾವು ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕ ಆರೋಗ್ಯವನ್ನು ಕಾಯ್ದುಕೊಳ್ಳಬಹುದು ಎಂದು ನಮ್ಮ ಪ್ರಾಚೀನ ಋಷಿಮುನಿಗಳ ಜೀವನ ಶೈಲಿಯಿಂದ ನಾವು ಅರಿತುಕೊಳ್ಳಬಹುದು

ಯೋಗ ಎಂದರೆ ಕೇವಲ ದೇಹವನ್ನು ನಮಗೆ ಬೇಕಾದ ರೀತಿಯಲ್ಲಿ ಮಣಿಸುವ, ಹೊರಳಿಸುವ ತಿರುಚುವ ಆಸನಗಳ ಕ್ರಿಯೆಯಲ್ಲ. ಯೋಗ ಕೇವಲ ವ್ಯಾಯಾಮವಲ್ಲ. ಯೋಗವು ನಮ್ಮ ಬದುಕಿನಲ್ಲಿ ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ಪ್ರಕ್ರಿಯೆ ಯೋಗವು ವ್ಯಕ್ತಿಯ ಆಧ್ಯಾತ್ಮಿಕ ಬದುಕನ್ನು ಶಿಸ್ತಿಗೆ ಒಳಪಡಿಸುವ ಒಂದು ಸಮಗ್ರ ವಿಜ್ಞಾನವಾಗಿದೆ. ಇದೊಂದು ಐತಿಹಾಸಿಕ, ಜೈವಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಉತ್ತಮ ತಳಹದಿಯನ್ನು ನೀಡುವ ವಿಜ್ಞಾನವಾಗಿದೆ

ಹಿಂದಿನಿಂದಲೂ ಯೋಗವನ್ನು ಯೋಗಹ ಚಿತ್ತವೃತ್ತಿ ನಿರೋಧಹ ಎಂದು ಪ್ರಶಂಸಿಸಿದ್ದು ಕೇವಲ ಪುರುಷರು ಮಾತ್ರ ಯೋಗವನ್ನು ಅಭ್ಯಸಿಸುತ್ತಿದ್ದರು...ಆದರೆ ಇದೀಗ ನೂರಕ್ಕೆ 72ರಷ್ಟು ಮಹಿಳೆಯರು ಯೋಗವನ್ನು ತಮ್ಮ ಬದುಕಿನ ಭಾಗವನ್ನಾಗಿಸಿದ್ದಾರೆ. 1937ರವರೆಗೆ ಯೋಗವನ್ನು ಸಾರ್ವಜನಿಕವಾಗಿ ಮಹಿಳೆಯರು ಮಾಡಲು ಅಥವಾ ಕಲಿಸಲು ಸಾಮಾಜಿಕ ಒಪ್ಪಿಗೆ ಇರಲಿಲ್ಲ ಎಂಬುದು ಅಚ್ಚರಿಯ ವಿಷಯವಾದರೂ ಇದು ನಿಜವಾಗಿತ್ತು.



ಭಗವಾನ್ ಪರಶಿವನನ್ನು ಆದಿ ಯೋಗಿ ಎಂದು ಕರೆಯಲಾಗಿದ್ದು ಮೊತ್ತ ಮೊದಲು ಯೋಗದ ಎಲ್ಲಾ ಜ್ಞಾನವನ್ನು ಪಡೆದುಕೊಂಡ ಶಿವ ಪರಮಾತ್ಮನು ಅದನ್ನು ಏಳು ಜನ ಋಷಿಮುನಿಗಳಿಗೆ ನೀಡಿದನು.

ಜೀವನ್ಮರಣಗಳ ಕ್ರಿಯೆಯಿಂದ ನಮಗೆ ಮುಕ್ತಿ ನೀಡುವ ಪರಶಿವನ ನಮಗೆ ರೋಗಗಳಿಂದ ಮುಕ್ತರಾಗಲು, ಮಾನಸಿಕ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಹಾಗೂ ಬಡತನದ ಮಾನಸಿಕತೆಯನ್ನು ದೂರ ಮಾಡಲು ಸಹಾಯಕನಾಗಿದ್ದಾನೆ.




ಯೋಗವನ್ನು ಪತಂಜಲಿಯು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಎಂಟು ವಿಭಾಗಗಳಲ್ಲಿ ಗುರುತಿಸಿದ್ದಾನೆ ಯಮವು ವೈಯುಕ್ತಿಕ ಸ್ವಚ್ಚತೆಯನ್ನು, ನಿಯಮವು ಬಾಹ್ಯದ ಹಾಗೂ ಸಾಮಾಜಿಕ ಸ್ವಚ್ಛತೆಯನ್ನು, ಆಸನದಲ್ಲಿ ವ್ಯಾಯಾಮದ ಅಭ್ಯಾಸಗಳನ್ನು,, ಪ್ರಾಣಾಯಾಮದಲ್ಲಿ ಉಸಿರಿನ ಏರಿಳಿತಗಳನ್ನು ನಿಯಂತ್ರಿಸುವ ಮೂಲಕ ಮನೋದೈಹಿಕ ಆರೋಗ್ಯವನ್ನು ಕಳೆದುಕೊಳ್ಳುವ, ಪ್ರತ್ಯಾಹಾರ ಎಂದರೆ ದೃಷ್ಟಿ, ಶ್ರವಣ ಮನಸ್ಸು ಮತ್ತು ದೈಹಿಕ ಪ್ರಚೋದನೆಗಳಿಂದ ದೂರವಾಗಿ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು, ಧ್ಯಾನದ ಮೂಲಕ ಬಾಹ್ಯದ ಒತ್ತಡಗಳನ್ನು ನಿಧಾನವಾಗಿ ನಿರ್ವಹಿಸುವ, ಒ ಸಮತೋಲನಗೊಳಿಸುವ ಹಾಗೂ ಕಡಿಮೆಗೊಳಿಸುವುದು, ಧಾರಣ ಎಂದರೆ ಅಸಾಧಾರಣ ಮಾನಸಿಕ ಸಾಮರ್ಥ್ಯವನ್ನು ಹೊಂದುವುದು ದೈಹಿಕ ದುರ್ಬಲತೆಯನ್ನು ಮೀರಿ ಶಕ್ತಿಶಾಲಿಯಾಗುವುದು ಹಾಗೂ ಮಾನಸಿಕ ಪ್ರಭುದ್ಧತೆಯನ್ನು ಹೊಂದುವುದು ಸಮಾಧಿ ಎಂದರೆ... ಈ ಎಲ್ಲಾ ಏಳು ಹಂತಗಳ ನಂತರ ಬರುವ ಸಮಾಧಿ ಸ್ಥಿತಿಯಲ್ಲಿ ವ್ಯಕ್ತಿಯು ರಾಗ ದ್ವೇಷಗಳಿಂದ, ನೋವು ನಲಿವುಗಳಿಂದ, ಸಿಟ್ಟು ಸಡವುಗಳಿಂದ ಮುಕ್ತನಾಗಿ ನಿರ್ಲಿಪ್ತ ಸ್ಥಿತಿಯನ್ನು ತಲುಪುತ್ತಾನೆ ಅಲ್ಲಿ ಆತ ನಿರ್ಭಾವ, ನಿರಾಕಾರ, ನಿರ್ಗುಣ ತತ್ವಗಳನ್ನು ಅನುಭವಿಸುತ್ತಾನೆ ಸಮಾಧಿ ಸ್ಥಿತಿಯಲ್ಲಿ ಮಾನಸಿಕವಾಗಿ ಸಂಪೂರ್ಣ ಚೈತನ್ಯ ಆತನಲ್ಲಿ ಇದ್ದರೂ ಕೂಡ ದೈಹಿಕವಾಗಿ ಆತ ಸಂಪೂರ್ಣವಾಗಿ ಜಡತೆಯನ್ನು ಹೊಂದಿರುತ್ತಾನೆ. ಇದು ಯೋಗದ ಪರಮ ಅವಸ್ಥೆ

ಪ್ರತಿಯೊಬ್ಬ ಮನುಷ್ಯನಿಗೂ ಆತನ ಜೀವಿತಾವಧಿಯಲ್ಲಿ ಇಂತಿಷ್ಟೇ ಎಂಬ ಉಸಿರಾಟದ ಎಣಿಕೆಗಳಿದ್ದು ಒತ್ತಡ, ಆತಂಕ, ಸಿಟ್ಟು, ಕೋಪ, ಭಯ ಮುಂತಾದ ಪರಿಸ್ಥಿತಿಗಳಲ್ಲಿ ವ್ಯಕ್ತಿಯು ತೀವ್ರವಾಗಿ ಉಸಿರಾಡುವ ಮೂಲಕ ತನ್ನ ಬದುಕಿನ ದಿನಗಳನ್ನು ಕಡಿಮೆಗೊಳಿಸಿಕೊಳ್ಳುತ್ತಾನೆ ಆದರೆ ಪ್ರಾಣಾಯಾಮದ ಮೂಲಕ ದೀರ್ಘವಾದ ಉಸಿರಾಟ ನಡೆಸುವ ಮೂಲಕ ಆತನ ನರ ನಾಡಿಗಳು ಶಾಂತಗೊಂಡು ಆತನ ಮಾನಸಿಕ ದುಗುಡುಗಳು ನಿವಾರಣೆಯಾಗಿ ಹೆಚ್ಚಿನ ಹೊಂದುತ್ತಾನೆ ಇದು ವೈಜ್ಞಾನಿಕವಾಗಿ ಕೂಡ ನಿಜವೆಂದು ಸಾಬೀತಾಗಿದೆ ತೀವ್ರವಾಗಿ ಉಸಿರಾಡುವ ನಾಯಿ ಹತ್ತರಿಂದ ಹನ್ನೆರಡು ವರ್ಷಗಳ ಜೀವಿತಾವಧಿಯನ್ನು ಹೊಂದಿದರೆ, ಅತ್ಯಂತ ನಿಧಾನವಾಗಿ ಉಸಿರಾಡುವ ಆಮೆ 200 ವರ್ಷಗಳ ಜೀವಿತಾವಧಿಯನ್ನು ಹೊಂದಿದೆ ಮಧ್ಯಮ ಸ್ಥಿತಿಯಲ್ಲಿ ಮನುಷ್ಯ ಇದ್ದಾನೆ. ನಿಧಾನವಾದ, ಅಷ್ಟೇ ಲಘುವಾದ ಹಾಗೂ ದೀರ್ಘವಾದ ಉಸಿರಾಟವು ವ್ಯಕ್ತಿಯ ಆಯುಸ್ಸನ್ನು ಹೆಚ್ಚಿಸುತ್ತದೆ

ನಿಯಮಿತವಾಗಿ ಯೋಗ ವನ್ನು ಅಭ್ಯಾಸ ವ್ಯಕ್ತಿಯ ಮೆದುಳಿನ ಕೋಶಗಳು ಅತ್ಯಂತ ಚುರುಕಾಗಿ ಕಾರ್ಯ ನಿರ್ವಹಿಸುತ್ತವೆ. ನೆನಪಿನ ಶಕ್ತಿ ಹಾಗೂ ಕಲಿಕೆಗೆ ಅತ್ಯವಶ್ಯಕವಾಗಿರುವ ಮೆದುಳಿನ ಹಿಪ್ಪೋಕ್ಯಾಂಪಸ್ ಎಂಬ ಭಾಗವು ಚೆನ್ನಾಗಿ ಅಭಿವೃದ್ಧಿ ಹೊಂದುತ್ತದೆ ಇದರಿಂದ ಅವರ ನೆನಪಿನ ಶಕ್ತಿ ಸುಧಾರಣೆಯಾಗಿ ಕಲಿಕೆಗೆ ಸಹಕಾರಿಯಾಗುತ್ತದೆ

ಬಹಳಷ್ಟು ಜನರು ಯೋಗವನ್ನು ಆಸನಗಳನ್ನು ಮಾಡುವ ಒಂದು ಕಲಿಕೆ ಎಂದು ಭಾವಿಸುತ್ತಾರೆ ಆದರೆ ಯೋಗವು ಕೇವಲ ಒಂದು ವ್ಯಾಯಾಮವಲ್ಲ.ಅದು ನಮ್ಮ ಮನಸ್ಸು ಮತ್ತು ದೇಹವನ್ನು ಏಕಾತ್ಮಗೊಳಿಸಿ ಕಾರ್ಯನಿರ್ವಹಿಸುತ್ತದೆ.

ಸಾಂಪ್ರದಾಯಿಕ ಯೋಗದಲ್ಲಿ ಒಟ್ಟು 84 ಮೂಲ ಆಸನಗಳಿದ್ದು ಅದರಲ್ಲಿ ಮತ್ತೆ ನೂರಾರು ವಿಭಿನ್ನ ಆಸನಗಳನ್ನು ನಾವು ಅಭ್ಯಸಿಸಬಹುದು

ಅಂತಿಮವಾಗಿ ಯೋಗ ಎಂಬುದು ಕೇವಲ ಆಸನಗಳ ಅಭ್ಯಾಸವಲ್ಲ.. ಅದೊಂದು ಅದ್ಭುತವಾದ ಪಯಣ.

ನಮ್ಮನ್ನು ನಾವು ಅರಿತುಕೊಳ್ಳುವ ಸಲುವಾಗಿ ನಮ್ಮಲ್ಲಿಯೇ ನಾವು ನಮ್ಮ ಕುರಿತ ವಿಶೇಷ ಅಧ್ಯಯನದ ಸ್ಥಿತಿ.

ಜೈಲಿನಲ್ಲಿ ಇರುವ ಕೈದಿಗಳ ಮಾನಸಿಕ ಮತ್ತು ದೈಹಿಕ ಸಮತೋಲನವನ್ನು ಕಾಯಲು ಹಾಗೂ ಭಾವನಾತ್ಮಕ ಒತ್ತಡಗಳನ್ನು ನಿರ್ವಹಿಸಲು ಯೋಗದ ಮೂಲಕ ಪ್ರಯತ್ನಿಸಲಾಗಿದ್ದು, ಅದು ಫಲಪ್ರದವಾಗಿದೆ. ಎಷ್ಟೋ ಜನ ಜೀವಾವಧಿ ಕಾರಾಗೃಹ ಶಿಕ್ಷೆಯನ್ನು ಪಡೆದುಕೊಂಡ ಕೈದಿಗಳ ವರ್ತನಾ ದೋಷಗಳು ನಿವಾರಣೆಯಾಗಿ ಅವರು ತಮ್ಮ ನಡವಳಿಕೆಯಲ್ಲಿ ಸುಧಾರಣೆಯನ್ನು ಹೊಂದಿದ್ದು ಅವರ ಶಿಕ್ಷೆಯ ಪ್ರಮಾಣದಲ್ಲಿ ಸುಧಾರಣೆಯಾಗಿದೆ.

ನಮ್ಮ ಸನಾತನ ಸಂಸ್ಕೃತಿಯು ನಮಗೆ ಕೊಡ ಮಾಡಿರುವ ಹಲವಾರು ವಿಷಯಗಳಲ್ಲಿ ಯೋಗವಿದ್ದೆಯು ಒಂದು. ಇಂತಹ ಅತ್ಯುತ್ತಮ ಯೋಗ ಸಂಸ್ಕೃತಿಯನ್ನು ನಾವು ನಮ್ಮೆಲ್ಲರಲ್ಲೂ ಅಳವಡಿಸಿಕೊಂಡು ಯಶಸ್ವಿ ಬದುಕನ್ನು ಮುನ್ನಡೆಸೋಣ



# ಟಿಪ್ಪರ್ ಹರಿದು ಬೈಕ್ ಸವಾರ ಸಾವು

**ಪಾವಗಡ:** ಬೈಕ್ ಸವಾರನ ಮೇಲೆ ಟಿಪ್ಪರ್ ಹರಿದ ಪರಿಣಾಮ ಹಿಂಬದಿ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಗುರುವಾರ ಮಧ್ಯಾಹ್ನ ಪಾವಗಡ ಪೊಲೀಸ್ ಠಾಣಾ ವ್ಯಾಪ್ತಿಯ ಗಂಗಾಸಾಗರ ಗೇಟ್ ಸಮೀಪ ನಡೆದಿದೆ. ಮೃತರನ್ನು ಪಾವಗಡ ತಾಲೂಕಿನ ದೊಡ್ಡಹಳ್ಳಿ ಗ್ರಾಮದ ವೆಂಕಟೇಶ್ ಹಾಗೂ ರಾಮಾಂಜಿನಮ್ಮ ದಂಪತಿಯ ಪುತ್ರ ನಂದೀಶ್ ಕುಮಾರ್ (18) ಎಂದು ಗುರುತಿಸಲಾಗಿದೆ. ನಂದೀಶ್ ಕುಮಾರ್ ದ್ವಿತೀಯ ಪಿಯುಸಿ ಉತ್ತೀರ್ಣರಾಗಿದ್ದು, ಮುಂದಿನ ವ್ಯಾಸಂಗಕ್ಕಾಗಿ ತುಮಕೂರಿನ ಕಾಲೇಜೊಂದರಲ್ಲಿ ಪ್ರವೇಶ ಪಡೆದಿದ್ದರು ಎಂದು ತಿಳಿದುಬಂದಿದೆ.

# ಸೋಲಿನಲ್ಲಿ ಗೆಲುವು ಕಂಡ ದ್ರೋಣ: ಒ.ಎಂ.ನಂಬಿಯಾರ್





ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 53

ಭಾರತದ ಟ್ರ್ಯಾಕ್‌ಗಳು ಇವರ ಹೆಸರನ್ನು ಕೇಳಿದರೆ ಈಗಲೂ ನಮಸ್ಕರಿಸುತ್ತವೆ.ಇವರು ಒ.ಎಂ. ನಂಬಿಯಾರ್.ಕೇರಳದ ಕಣ್ಣೂರಿನ ಮಣ್ಣಿನ ಮಗ.1955ರಲ್ಲಿ ವಾಯುಪಡೆಯ ಸೈನಿಕರಾಗಿ ಸೇರಿ, ಕ್ರೀಡಾಂಗಣವನ್ನು ತಮ್ಮ ಯುದ್ಧಭೂಮಿಯಾಗಿ ಆರಿಸಿಕೊಂಡರು.

1977ರಲ್ಲಿ ಒಂದು ಪುಟ್ಟ ಹುಡುಗಿಯ ಕಣ್ಣಲ್ಲಿ ಕನಸು ಕಂಡರು.ಆ ಕನಸಿಗೆ ಪಿ.ಟಿ.ಉಷಾ ಎಂದು ಹೆಸರು.ಜಗತ್ತು ಅಸಾಧ್ಯ ಎಂದಾಗ,ನಂಬಿಯಾರ್ ಅವರು ಸಾಧ್ಯ ಎಂದು ತೋರಿಸಿಕೊಟ್ಟರು. ಸೆಕೆಂಡಿನ ನೂರನೇ ಒಂದು ಭಾಗದಲ್ಲಿ ಒಲಿಂಪಿಕ್ ಪದಕ ತಪ್ಪಿದಾಗ ಇಡೀ ದೇಶ ಕಣ್ಣೀರಿಟ್ಟಿತು. ಆದರೆ ನಂಬಿಯಾರ್ ಅವರು ಶಿಷ್ಯೆಯ ಬೆನ್ನು ತಟ್ಟಿ ಹೇಳಿದರು ನೀನು ಸೋತಿಲ್ಲ,ಭಾರತ ಎಚ್ಚೆತ್ತಿದೆ.

ಅಲ್ಲಿಂದ ಆರಂಭವಾದದ್ದು ಹೊಸ ಯುಗ.ಏಷ್ಯನ್ ಗೇಮ್ಸ್‌ನಲ್ಲಿ ಪದಕಗಳ ಸುರಿಮಳೆ,ವಿಶ್ವದ ಟ್ರ್ಯಾಕ್‌ನಲ್ಲಿ ಭಾರತದ ಹಾಡು. ಇವರು ಕೇವಲ ತರಬೇತುದಾರರಲ್ಲ, ಕನಸುಗಳಿಗೆ ರೆಕ್ಕೆ ಕಟ್ಟಿದ ಶಿಲ್ಪಿ. 1985ರ ದ್ರೋಣಾಚಾರ್ಯ, 2021ರ ಪದ್ಮಶ್ರೀ ಇವರಿಗೆ ಸಂದ ಗೌರವವಾದರೆ,ನೂರಾರು ಕ್ರೀಡಾಪಟುಗಳ ಬದುಕು ಇವರ ನಿಜವಾದ ಪ್ರಶಸ್ತಿ.

2021ರಲ್ಲಿ ಇವರು ದೈಹಿಕವಾಗಿ ಮರೆಯಾದರೂ,ಪ್ರತಿ ಓಟಗಾರನ ಉಸಿರಿನಲ್ಲೂ ಇವರ ಮಂತ್ರವಿದೆ: ಗೆಲುವು ಮುಖ್ಯವಲ್ಲ,ಗೆಲ್ಲುವ ಛಲ ಮುಖ್ಯ.ನಂಬಿಯಾರ್ ಅವರು ನಮಗೆ ಬಿಟ್ಟುಹೋದದ್ದು ಟ್ರ್ಯಾಕ್ ಅಲ್ಲ,ಸ್ಫೂರ್ತಿಯ ರಾಜಮಾರ್ಗ.

# ನನ್ನೂರ ನೆಲ-ನನ್ನೂರ ಜಲ!!



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.



ಮನದ ಮಾತು...

ಬದುಕಿನ ಪಯಣದಲ್ಲಿ ಸಮಯಕ್ಕನುಗುಣವಾಗಿ ಹೊಟ್ಟೆಪಾಡಿಯನ್ನು ಅರಿಸಿಯೋ, ಅಥವಾ ಮದುವೆಯಾಗಿಯೋ? ತಾನು ಹುಟ್ಟಿದ ಊರನ್ನು ಬಿಟ್ಟು ಬೇರೆ ಊರಿನಲ್ಲಿ ಬೇರೂರಬೇಕಾದ ಅನಿವಾರ್ಯತೆಗಳು ಅನೇಕ. ಕೆಲವರಿಗೆ ಉದ್ಯೋಗ, ಕೆಲವರಿಗೆ ವಿದ್ಯಾಭ್ಯಾಸ, ಕೆಲವರಿಗೆ ದಾಂಪತ್ಯ ಕಾರಣಗಳು ಬೇರೆಬೇರೆ. ಆದರೆ ಎಲ್ಲರೊಳಗೂ ಒಂದೇ ಸಾಮ್ಯ; ಬೇರು ಬಿಟ್ಟ ಮಣ್ಣಿನಿಂದ ದೂರವಾಗುವಾಗ ಮನಸ್ಸಿನ ಒಂದು ತುಂಡು ಅಲ್ಲಿ ಉಳಿದುಬಿಡುತ್ತದೆ.

ಹೊಸ ಊರು ಬದುಕಿನ ಸೌಲಭ್ಯಗಳನ್ನು ಕಟ್ಟಿಕೊಡುತ್ತದೆ. ಕಾಂಕ್ರೀಟ್ ಗೋಡೆಗಳು ಭದ್ರತೆ ಕೊಡುತ್ತವೆ. ಎತ್ತರದ ಕಟ್ಟಡಗಳು ಬದುಕಿಗೆ ವೈಭವ ಕೊಡುತ್ತವೆ. ಆದರೆ ಹುಟ್ಟಿದ ಊರಿನ ಮಣ್ಣಿನ ವಾಸನೆ, ಅಲ್ಲಿನ ಗಾಳಿಯ ಸ್ಪರ್ಶ, ಪರಿಚಿತ ಮುಖಗಳ ಮಮತೆ ಇವುಗಳಿಗೆ ಸಮನಾದುದು ಮತ್ತೊಂದಿಲ್ಲ.

ಈಗಲೂ ಯಾವುದಾದರೂ ಹಂಚಿನ ಮನೆಯಿಂದ ಹೊಗೆ ಎದ್ದುದನ್ನು ಕಂಡರೆ, ಬೆಳಗಿನ ಮಂಜಿನಲ್ಲಿ ಬಯಲು ಎತ್ತಲ ಜಾಗಗಳಲ್ಲಿ ದನ-ಕರುಗಳು ಮೇಯುತ್ತಿರುವುದನ್ನು ನೋಡಿದರೆ, ಮನಸ್ಸು ಅರಿವಿಲ್ಲದಂತೆ ತನ್ನೂರಿನ ಹಳೆಯ ನೆನಪುಗಳಿಗೆ ಜಾರಿಬಿಡುತ್ತದೆ. ಗೋಮಯ ಸಾರಿಸಿದ ಅಂಗಳ, ಬಿಸಿಲಿಗೆ ಒಣಗಲು ಹಾಸಿದ ಮೆಣಸಿನಕಾಯಿ, ಒಲೆಯ ಮೇಲಿನ ಪಾತ್ರೆಯಲ್ಲಿ ಕುದಿಯುವ ಹಾಲು, ಮನೆಯ ಹಿತ್ತಲಲ್ಲಿ ಕೂಗುವ ಕೋಳಿಗಳು?ಅವೆಲ್ಲ ಕಣ್ಣಮುಂದೆ ಜೀವಂತವಾಗಿ ನಿಂತುಕೊಳ್ಳುತ್ತವೆ.

ಹೊಸ ಊರು ಮನೆ ಕೊಟ್ಟಿರಬಹುದು, ನೆಮ್ಮದಿ ಕೊಟ್ಟಿರಬಹುದು. ಆದರೆ ಹುಟ್ಟಿದ ಊರು ಕೊಟ್ಟ ಬಾಲ್ಯ?ಅದು ತಂಬಿಟ್ಟಿನಂತೆ. ಉಂಡು ಉಂಡು ಸವಿದಷ್ಟೂ ಅದರ ಸಿಹಿ ಕಡಿಮೆಯಾಗದೆ ಇನ್ನಷ್ಟು ಹೆಚ್ಚಾಗುತ್ತಲೇ ಇರುತ್ತದೆ.

ವರುಷಗಳೇ ಉರುಳಿ ಹೋದರೂ ನಮ್ಮ ಶಾಲೆಯ ಮೋಹ ಮಾತ್ರ ಕಡಿಮೆಯಾಗುವುದಿಲ್ಲ. ಆ ಹಳೆಯ ಇಟ್ಟಿಗೆಯ ಕಟ್ಟಡ, ಹಂಚಿನ ಮಾಳಿಗೆಗಳು, ಮಧ್ಯಾಹ್ನದ ಗಾಳಿಗೆ ತೂಗುವ ಕಬ್ಬಿಣದ ಗಂಟೆ, ಕೀಚೆನ್ನುವ ಕಿಟಕಿ, ಆಚೆ ಕಾಣುವ ಹಸಿರು ನೋಟ, ಕಟ್ಟಿಗೆಯ ಬೆಂಚುಗಳು?ಇವೆಲ್ಲವೂ ಈಗಲೂ ನಮಗೂ ಅವಕ್ಕೂ ಏನೋ ಸಂಬಂಧವಿದೆ ಎಂದು ಪಿಸುಗುಡುತ್ತವೆ.

ಆ ಬೆಂಚುಗಳ ಮೇಲೆ ಕುಳಿತು ಎಷ್ಟೋ ಅಕ್ಷರಗಳನ್ನು ಕಲಿತೆವು. ಮೊದಲ ಅ, ಆ, ಇಗಳಿಂದ ಹಿಡಿದು ಜೀವನದ ಮೊದಲ ಕನಸುಗಳವರೆಗೂ ಅಲ್ಲಿ ಮೊಳಕೆಯೊಡೆದವು. ಎಷ್ಟೋ ಬಾರಿ ಶಿಕ್ಷಕರ ಬೈಗುಳ, ಎಷ್ಟೋ ಬಾರಿ ಗೆಳೆಯರ ನಗು, ಎಷ್ಟೋ ಬಾರಿ ಮಧ್ಯಾಹ್ನದ ಡಬ್ಬಿಯ ಹಂಚಿಕೆ?ಅವೆಲ್ಲ ಇಂದು ನೆನಪಾದರೆ ಕಣ್ಣಂಚು ಒದ್ದೆಯಾಗುತ್ತದೆ.

ನಿಜ ಹೇಳಬೇಕೆಂದರೆ ?ನನ್ನೂರು, ನನ್ನ ಶಾಲೆ, ನನ್ನದು? ಎಂದು ಹೇಳಲು ಅಲ್ಲಿ ನಮ್ಮ ಹೆಸರಿನ ಯಾವ ಫಲಕವೂ ಇರದೇ ಇರಬಹುದು. ಆದರೆ ಆ ಊರಿನ ನೆನಪು, ಆ ಶಾಲೆಯ ನೆನಪು?ಭಾವನಾತ್ಮಕವಾಗಿ ಅದು ಎಂದಿಗೂ ನಮ್ಮದೇ ಆಗಿ ಉಳಿದುಕೊಳ್ಳುತ್ತದೆ.

ತಮ್ಮೂರನ್ನು ತೊರೆದು ಪಟ್ಟಣಕ್ಕೆ ಕೆಲಸ ಕಾರಣಗಳಿಂದ ಹೋಗಿರಬಹುದು, ಮದುವೆಯಾಗಿ ಹೋಗಿರಬಹುದು. ಮೊದಲಿಗೆ ಜಗಮಗಿಸುವ ಪಟ್ಟಣ ಆಕರ್ಷಿಸುತ್ತದೆ. ದೀಪಗಳ ಸಾಲು, ಅಗಲ ರಸ್ತೆಗಳು, ಶಾಪಿಂಗ್ ಮಾಲ್‌ಗಳು, ಸುಖಸೌಲಭ್ಯಗಳು?ಎಲ್ಲವೂ ಹೊಸದಾಗಿ, ಚೆನ್ನಾಗಿ ಕಾಣುತ್ತವೆ. ಆದರೆ ದಿನಗಳು ಕಳೆಯುತ್ತಿದ್ದಂತೆ ಆ ಜಗಮಗಿಕೆಯ ಮಧ್ಯೆಯೂ ಒಂದು ವಿಚಿತ್ರ ಖಾಲಿತನ ಮನಸ್ಸನ್ನು ಆವರಿಸುತ್ತದೆ.

ಊರಿನಲ್ಲಿ ನಡೆಯುವ ಜಾತ್ರೆಗಳು, ದೇವರ ಉತ್ಸವಗಳು, ಪಂಕ್ತಿಯ ಊಟಗಳು, ?ನಮ್ಮವರೇ? ಎಂಬ ಆತ್ಮೀಯ ಭಾವ?ಇವೆಲ್ಲವೂ ಮತ್ತೆ ಮತ್ತೆ ನೆನಪಿನಾಳಕ್ಕೆ ನೂಕುತ್ತವೆ. ಅಪರಿಮಿತ ಆನಂದದ ಬಾಲ್ಯದ ಆಟಗಳು? ಮಣ್ಣಿನಲ್ಲಿ ಉರುಳಿ ಆಡಿದ ದಿನಗಳು? ಮಳೆ ಬಂದಾಗ ಕಾಲುವೆಯಲ್ಲಿ ಕಾಗದದ ದೋಣಿ ಹರಿಸಿದ ಸಂಭ್ರಮ?

ಸಣ್ಣದಾದರೂ ಮೋಹ ಉಳಿಸಿಕೊಡುವ ಆ ತಟ್ಟಿ ಹೋಟೆಲುಗಳು? ಐದು ರೂಪಾಯಿಗೆ ಹೊಟ್ಟೆ ತುಂಬಿಸುವ ತಿಂಡಿಗಳು? ಸೂಪರ್‌ಮಾರ್ಟ್‌ಗಳಷ್ಟು ದೊಡ್ಡದಲ್ಲದ ಆ ಕಿರಾಣಿ ಗೂಡಂಗಡಿಗಳು? ಗಾಜಿನ ಭರಣಿಯಲ್ಲಿ ತುಂಬಿಟ್ಟ ಪೆಪ್ಪರ್‌ಮಿಂಟ್ ಮಿಠಾಯಿಗಳು?ಅವೆಲ್ಲ ಎಂತಹ ಜಾದು! ಒಂದು ಮಿಠಾಯಿ ಸಿಕ್ಕರೂ ದಿನವೇ ಹಬ್ಬವಾದ ಕಾಲ.

ಪಟ್ಟಣದ ಬಹುಮಹಡಿ ಕಟ್ಟಡಗಳಲ್ಲಿ ಮನೆಯ ಬಾಗಿಲಿಗೆ ಸದಾ ಬೀಗ ಜಡಿದಿರುವುದನ್ನು ನೋಡಿದಾಗ, ಹಳ್ಳಿಯಿಂದ ಹೋದವರಿಗೆ ಉಸಿರುಗಟ್ಟಿದ ಭಾವ. ಹಳ್ಳಿಯ ಮನೆಗಳಿಗೆ ಕರೆಗಂಟೆಗಳೇ ಇಲ್ಲ. ಯಾಕೆಂದರೆ ಅಲ್ಲಿ ಬಾಗಿಲಿಗಿಂತ ಮೊದಲು ಮನಸ್ಸೇ ತೆರೆದಿರುತ್ತದೆ.

ಬೆಳಿಗ್ಗೆ ನೇಸರನ ಜೊತೆ ಬಾಗಿಲು ತೆರೆದರೆ, ಸಂಜೆಯವರೆಗೂ ಮತ್ತೆ ಮುಚ್ಚುವುದೇ ಇಲ್ಲ. ಮನೆಯೊಂದಿಗೆ ಹೃದಯಗಳೂ ತೆರೆದಿರುತ್ತವೆ. ಮನೆಯ ಜಗುಲಿಗೆ ಕುಳಿತು ಹೋಗುವವರನ್ನೂ, ಬರುವವರನ್ನೂ ಮಾತನಾಡಿಸುತ್ತಾ ಕಳೆಯುವ ಸಮಯ?ಅದೇ ಹಳ್ಳಿಯ ಐಶ್ವರ್ಯ.

ಒಬ್ಬರು ಹಾದುಹೋದರೂ ?ಏನ್ ಸುದ್ದಿ?? ಎಂದು ಕೇಳುವರು. ಸಂಬಂಧಕ್ಕೆ ಆಹ್ವಾನ ಬೇಕಾಗಿರಲಿಲ್ಲ; ಪರಿಚಯಕ್ಕೆ ಪರಿಚಯ ಪತ್ರ ಬೇಕಾಗಿರಲಿಲ್ಲ.

ಇನ್ನು ಹಸಿರು ಹೊನ್ನು ಮಲೆನಾಡಿನಿಂದ ಬಂದವರ ಸಂಭ್ರಮವೇ ಬೇರೆ. ಬೆಳಗಾದರೆ ಶಾವಿಗೆ ಎಳೆಯಂತೆ ಭಾವಣಿಯಿಂದ ನೆಲಕ್ಕೆ ಹಿಡಿದು ಬೀಳುವ ಮಳೆ? ಆರದ ಒಲೆಗಳು? ಛಳಿಗೆ ಹಿತ ನೀಡುವ ಬೆಚ್ಚನೆಯ ಬದುಕು? ಕಣ್ಣು ಹರಿದಷ್ಟು ಹಸಿರು, ಮತ್ತೆ ಉಸಿರು.

ಹೆಚ್ಚು ಜಂಬರವಿಲ್ಲದ ಗಂಜಿ ಊಟ, ಮಿಡಿ ಉಪ್ಪಿನಕಾಯಿ?ಇವುಗಳಿಗೆ ಸರಿಗಟ್ಟೀತೇ ಪಿಜ್ಜಾಗಳು? ಒಲೆಯ ಹೊಗೆಯಲ್ಲಿ ಬೇಯಿಸಿದ ರುಚಿಗೆ, ಮನೆಯ ಕೈಯ ಸವಿಗೆ, ಯಾವ ಫಾಸ್ಟ್‌ಫುಡ್ ಸಾಟಿ?

ಹಿತ್ತಲ ಸೌತೆ, ಬದನೆ, ಕುಂಬಳದ ಸಂಭ್ರಮ? ಮಡಿಲಲ್ಲಿ ಕೂತು ಬೇಳೆ ಬೀಜ ಆರಿಸುವ ಅಮ್ಮ? ಹೊಲದಿಂದ ಬಂದು ಬೆವರು ಒರೆಸಿಕೊಳ್ಳುವ ಅಪ್ಪ? ಇವೆಲ್ಲವೂ ಬದುಕಿನ ಕಾವ್ಯ.

ಸಮುದ್ರ ತಟದ ಊರುಗಳ ಸೊಗಡು ಇನ್ನೊಂದು ಲೋಕ. ಉಪ್ಪಿನ ಗಾಳಿ, ಅಲೆಗಳ ಘರ್ಜನೆ, ಮುಂಜಾನೆ ಮೀನುಗಾರರ ಕೂಗು?ಅಲ್ಲಿಯೂ ಮಣ್ಣಿಗೆ ತನ್ನದೇ ಹಾಡಿದೆ. ಬಯಲುಸೀಮೆಯ ಧೂಳಿನ ಪರಿಮಳಕ್ಕೂ, ಮಲೆನಾಡಿನ ಮಂಜಿಗೂ, ಕಡಲ ತೀರದ ಉಪ್ಪಿನ ಗಾಳಿಗೂ ತಮ್ಮದೇ ಆತ್ಮ ಇದೆ.

ಕವಿ Betageri Krishna Sharma (ಆನಂದಕಂದ) ತಮ್ಮ ಪದ್ಯದಲ್ಲಿ ಊರಿನ ಮೋಹವನ್ನು ಎಷ್ಟು ಚೆಂದವಾಗಿ ಕಟ್ಟಿ ಕೊಟ್ಟಿದ್ದಾರೆ.

ಕವಿ:: ಆನಂದಕಂದ (ಬೆಟಗೇರಿ ಕೃಷ್ಣಶರ್ಮ)
ಕವನ ಸಂಕಲನ : ನಲ್ವಾಡುಗಳು
-ಪಲ್ಲವಿ-
ನಮ್ಮ ಹಳ್ಳಿಯೂರ,, ನಮಗ ಪಾಡ,,-
ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!

**1**

**ಊರಮುಂದ ತಿಳಿನೀರಿನ ಹಳ್ಳಽ-**
**ಬೇವು ಮಾವು ಹುಲಗಲ ಮರಚೆಳ್ಳ,,-**
**ದಂಡಿಗುಂಟ ನೋಡು ನೆಳ್ಳಽ ನೆಳ್ಳಽ-**
**ನೀರ ತರುವಾಗ ಗೆಣತ್ಯಾರ ಜೋಡ,,. . .**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,?**

**2**

**ನಮ್ಮ ಹಳ್ಳ ಕಾಶಿಯ ಹಿರಿಹೊಳಿಯ**
**ಒಮ್ಮ್ಯಾದರು ಬತ್ತಿಲ್ಲದು ತಿಳಿಯ-**
**ಬದಿಯ ತ್ವಾಟಗಳ ಬೆಳಸಿಗೆ ಕಳಿಯ-**
**ಹ್ಯಾಂಗ ಕೊಡತೈತಿ ಬಂದೊಮ್ಮೆ ನೋಡ,,. . .**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**3**

**ಪಡಿವಿಯ ತುಂಬಾ ಕಾಳಿನ ಚೀಲಾ-**
**ನಡುಮನಿಯೊಳಗಽ ಗಳಿಗಿಯ ಸಾಲಾ-**
**ತುಂಬಿ ಸೂಸತಾವ ಗಡಿಗಿಯಡಕಲಾ-**
**ಖಾಲಿ ಇಲ್ಲವ್ವಾ ಒಂದೂ ಮನಿ-ಮಾಡ,,. . .**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**4**

**ಹೈನದೆಮ್ಮಿ ನೋಡ ಹಾಲ ಸಮುದರಾ-**
**ಎಷ್ಟು ತಿನ್ನಾಕಿ ನೀ ಕೆನಿಕೆನಿ ಮಸರಾ-**
**ಮಜ್ಜಿಗಿ ಒಯ್ತಾರ ಊರಂತೂರಾ-**
**ಸೂಲಕ್ಕೊಂದು ಬಂಗಾರ್‌ಬಳಿ ಜೋಡ,,**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**5**

**ಹೂಡುವೆತ್ತು ಹಕ್ಕಿಗೆ ಸಿಂಗಾರಾ-**
**ತಿಂದ ರಿಣಾ ತೀರಸತಾವ ಪೂರಾ-**
**ಎತ್ತು ಅಲ್ಲ ನಮ್ಮನಿ ದೇವ್ರಾ-**
**ಬಸವಣ್ಣಿರದಂಥಾ ಮನಿಯದು ಕಾಡ,,**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**6**

**ಗರಡಿಯ ಹುಡುಗರ ಹುರುಪು ಅದೇನ,,**
**ಕರಡಿ-ಹಲಿಗಿಮಜಲಿನ ಮೋಜೇನ,,-**
**ಬಯಲಾಟದ ಸುಖಕಿಲ್ಲ ಸಮಾನ-**
**ಕೇಳಿಲ್ಲೇನಽ ಲಾವಣಿ ಗೀಗೀ ಹಾಡ,,. . .**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**7**

**ರಾಯ ಅರಸು ನಾನಾತಗ ರಾಣಿ-**
**ನಮ್ಮ ಪ್ರೀತಿಯೊಳು ಸ್ವಲ್ಪೂ ಕಾಣಿ-**
**ಬಂದೆ ಇಲ್ಲ ನೋಡ ನನ್ನ ತವರಾಣಿ-**
**ನಮ್ಮ ಸಂಸಾರ ಜೇನಿನ ಗೂಡ,,**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**8**

**ಪ್ಯಾಟಿಯೂರಿನಾ ಬಣ್ಣದ ಹೆಣ್ಣ,,-**
**ಮಾಟ ಮಾಡದಲೆ ಬಿಟ್ಟಾವೇನ,,-**
**ನಮ್ಮ ರಾಯ ನಮಗ ದಕ್ಕ್ಯಾನೇನ,,-**
**ಪ್ಯಾಟೀ ಊರಂಬ ಸುದ್ದೀ ತಗಿಬ್ಯಾಡ,,. . .**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

**9**

**ಊರಕಾವಲಿಗೆ ಸೀಮಿಯ ಭರಮಾ-**
**ಪಾರೆ ಮಾಡತಾನ ಶ್ರೀ ಬಲಭೀಮಾ-**
**ಮೀರಿದ ದೇವತಿ ಗುಡಿಯೆಲ್ಲಮ್ಮಾ-**
**ಇವರಽ ಕರುಣಾ ತಪ್ಪಿದರೆಲ್ಲಾ ಕೇಡ,,. . .**
**ಯಾತಕವ್ವಾ ಹುಬ್ಬಳ್ಳಿ-ಧಾರ್ವಾಡ,,!**

ಅದ್ಭುತ! ತನ್ನೂರಿನಲಿ ಹರಿಯುವ ನದೀ-ಹಳ್ಳಗಳೇ ಕಾಶಿ, ತೀರ್ಥಗಳಾದರೆ; ಹೊಲಕೆ ಜೋಡಾದ ಬಸವಣ್ಣ ಮನೆಯ ದೇವರು.

ಊರಿನಲಿ ಹುಲ್ಲು ಮೇಯುವ ಎಮ್ಮೆ, ಆಕಳು, ದನ-ಕರುಗಳು ಹೊಟ್ಟೆಗೆ ಹೈನಿನ ಅಂಬರ ಮಾಡುವುದಷ್ಟೇ ಅಲ್ಲ, ಅವನ್ನು ಸಾಕುವ ಹೆಣ್ಣುಮಕ್ಕಳಿಗೆ ಆರ್ಥಿಕ ಬಲವೂ ಆಗುತ್ತವೆ. ಪ್ರತಿಯೊಂದು ಸೂಲಿನಲ್ಲಿ ಕರು ಹಾಕಿದಾಗ ಅವರ ಕೈಗೆ ಬಳೆ ತೊಡಿಸುವ ಹೊನ್ನಿನ ಕಾರಣಗಳಾಗುತ್ತವೆ. ಹೆಣ್ಣುಮಕ್ಕಳ ಆರ್ಥಿಕ ಸ್ವಾತಂತ್ರ್ಯವನ್ನೇ ಕವಿ ಎಷ್ಟು ಸೊಗಸಾಗಿ ಹೇಳಿದ್ದಾನೆ!

ಊರನ್ನು ಕಾಯುವ ದೇವತೆಗಳು?ದ್ಯಾಮವ್ವ, ದುರಗವ್ವ?ತಾಯಿ ಸ್ವರೂಪಗಳು. ಸೀಮೆ ಕಾಯುವ ಹನುಮ, ಭೀಮ, ಭರಮ?ಅವು ಕೇವಲ ದೇವರುಗಳಲ್ಲ; ಜನರ ನಂಬಿಕೆಯ ಉಸಿರು.

ಎಷ್ಟೇ ದೂರ ಹೋದರೂ, ಎಷ್ಟೇ ದೊಡ್ಡವರಾದರೂ, ಮನಸ್ಸಿನ ಒಳಗೊಂದು ಮೂಲೆಯಲ್ಲಿ ಒಂದೇ ಧ್ವನಿ ಮತ್ತೆ ಮತ್ತೆ ಕೇಳಿಸುತ್ತಿರುತ್ತದೆ?

ನನ್ನೂರ ನೆಲ
ನನ್ನೂರ ಜಲ
ನನ್ನೂರ ಗಾಳಿ
ನನ್ನೂರ ಜನ
ಇವೇ ನಮ್ಮ ಬೇರುಗಳು.
ಇವೇ ನಮ್ಮ ಅಸ್ತಿತ್ವ.
ಇವೇ ನಮ್ಮ ಮೊದಲ ಪ್ರೀತಿ.
ಊರು ಎಂದರೆ ಕೇವಲ ಒಂದು ಸ್ಥಳವಲ್ಲ
ಅದು ನೆನಪು.
ಅದು ಮಮತೆ.
ಅದು ಜೀವ.
ಬೇರು ಮರೆಯುವ ಮರ ಬದುಕಲಾರದು
ಹಾಗೆಯೇ ಊರಿನ ನೆನಪು ಮರೆಯುವ ಮನಸ್ಸು ಸಂಪೂರ್ಣವಾಗಲಾರದು.

---

# ಮರೆಯಾಗವಳು ಗೃಹಿಣಿ



ಸ್ನೇಹಾ ಆನಂದ್

ಸ್ನೇಹ ಲೋಕ



ಒಬ್ಬ ಗೃಹಿಣಿಗೆ ಸಿಗುವ ಅವಳದೇ ಆದ ಏಕಾಂತ ಸಮಯ ಯಾವುದು ಹೇಳಿ? ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ, ಅಡುಗೆ ,ಊಟ ಮುಗಿದು, ಮನೆಯನ್ನು ಅಚ್ಚುಕಟ್ಟಾಗಿ ಇಟ್ಟು ಎಲ್ಲಾ ಕೆಲಸ ಮುಗಿಸಿದ ನಂತರವೇ ಅಲ್ಲವೇ!

ಅತ್ಯಂತ ಸಮಾಧಾನದಿಂದ ಮಧ್ಯಾಹ್ನದ ಸಮಯದಲ್ಲಿ ಹಾಸಿಗೆಯ ಮೇಲೆ ಸೋತ ಬೆನ್ನನ್ನು 'ಹಾಯ್' ಅಂತ ಒರಗಿಸಿ ಕೈಯಿಂದ ಸೊಂಟವನ್ನು ಒತ್ತಿಕೊಂಡು ಕಣ್ಣನ್ನು ಒಂದು ಕ್ಷಣ ಗಟ್ಟಿಯಾಗಿ ಮುಚ್ಚಿ ಮೈಮುರಿಯುವುದು ಇದೆಯಲ್ಲ ಅದೇ ಗೃಹಿಣಿಗೆ ತರುವ ಅತ್ಯಂತ ಸಂತೃಪ್ತಿ ಸಮಯ! ಆ ಕ್ಷಣದಲಿ ಯಾರಾದರೂ ಪಾದ ಸೇವೆ ಮಾಡಿದರೆ ಎಷ್ಟು ಚೆಂದ ಅನಿಸುತ್ತದೆ, ಅಷ್ಟು ಕಾಲುಗಳು ಮಾತನಾಡುತ್ತಿರುತ್ತವೆ!

ಈ_ಸಮಯ_ಆನಂದಮ ಪ್ರತಿ ದಿನದ ಬಾಳಿಗೆ!

ಮಕ್ಕಳ ಬಾಕ್ಸಿಗೆ ಬೇಕಾದ್ದು ಮಾಡಿ ಹಾಕಿ, ಪತಿಗೆ ತಿಂಡಿ ಮಾಡಿ, ಬುತ್ತಿ ಕಟ್ಟಿ ಅವರಿಗೆಲ್ಲಾ ಪ್ರೀತಿಯಿಂದ ಟಾಟಾ ಹೇಳಿ ಮನೆ ಸ್ವಚ್ಛಗೊಳಿಸಿದರೆ ಆವತ್ತಿನ ಕೆಲಸ ಸಂಪೂರ್ಣವಾಗಿ ಮುಗಿದಂತೆ ಭಾಸವಾಗುತ್ತದೆ ಅಪ್ಪಟ ಗೃಹಿಣಿಗೆ!

ಹಳೆಯ ಕಾಲದಲ್ಲಾದರೆ ಈ ಮೊಬೈಲ್ ಇರದೆ ಟೀವಿಯೇ ಗತಿಯಿತ್ತು, ಯಾರಿಗೂ ಫೋನ್, ಮೇಸೆಜ್ ಮಾಡುತ್ತಿರಲು ಯಾವ ಸಾಧನಗಳು ಇರುತ್ತಿರಲಿಲ್ಲ,ಹೀಗಾಗಿ ಆ ಮಧ್ಯಾಹ್ನದ ಪೂರ್ತಿ ಸಮಯ ನಮ್ಮದೇ!

ಆದರೆ ಈಗ ಹತ್ತಿರದಲ್ಲೇ ಗೃಹಣಿಯ ಪಟ್ಟ ಅವನತಿಗೆ ಬಂದಿದೆ ಎಂದರೆ ಸುಳ್ಳಾಗ ಲಾರದು,, ಆದರೆ ಈಗಲೂ ಈ ಆಧುನಿಕ ಯುಗದಲ್ಲೂ ಇನ್ನೂ ಒಂದು ಮಧ್ಯ ವಯಸ್ಕರ ಪೀಳಿಗೆ ನಡುಗಡ್ಡೆಯಂತೆ ಉಳಿದಿದೆ!

ಬರೀ ಗಂಡ, ಮಕ್ಕಳು, ಮನೆ ಎನ್ನುವ ಗೃಹಿಣಿ ಪಟ್ಟ ಕಟ್ಟಿಕೊಂಡು ಅದರಲ್ಲೇ ಸಂತೃಪ್ತಿ ಪಡೆದವರು ಈಗಲೂ ಇದ್ದಾರೆ ಅಥವಾ ಇದ್ದೀವಿ! ಆದರೆ ಇದೇ ನಮ್ಮ ಕೊನೆಯ ಪೀಳಿಗೆ ಅಷ್ಟೇ! ರುಚಿ ರುಚಿಯಾದ, ಬಿಸಿ ಬಿಸಿಯಾದ ಊಟ ತಾಯಿಯ ಅಥವಾ ಹೆಂಡತಿಯ ಕೈಯಲ್ಲಿ ಸಿಗುವುದು ಇನ್ನು ಮೇಲೆ ಗಂಡ, ಮಕ್ಕಳಿಗೆ, ಕಠಿಣವೇ!

ಮುಂದಿನ ದಿನಗಳಲ್ಲಿ ನಮ್ಮಂತಹ ಮುತ್ತಿನಂತಹ ಗೃಹಿಣಿಯರೆಂದು ಬಿರುದು ಪಡೆದಿರುವ ಹೆಣ್ಣು ಮಕ್ಕಳನ್ನು ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ ಕಣ್ರೀ! ಗೃಹಣಿ ಅಥವಾ ಈಗೀನ ಫ್ಯಾಷನ್ ಆದ ಹೋಮ್ ಮೇಕರ್ ಎನ್ನುವ ಪದ ತಳ ಹಿಡಿಯುತ್ತದೆ !

ಏನಿದ್ದರೂ ಇನ್ನು ಮೇಲೆ ಹೆಣ್ಣುಮಕ್ಕಳು ನಾವು ಇಂಜಿನಿಯರ್, ಡಾಕ್ಟರ್, ಲೆಕ್ಚರರ್, ಲಾಯರ್, ಹೀಗೆ ತಮ್ಮನ್ನು ತಾವು ನಾನಾ ರೀತಿಯಲ್ಲಿ ಪರಿಚಯಿಸಿಕೊಳ್ಳುತ್ತಾರೆ ಹೊರತು ಗೃಹಿಣಿ ಅಂತ ಅಪ್ಪಿ,ತಪ್ಪಿಯೂ ಹೇಳುವುದಿಲ್ಲ!

ನಾನು ಗೃಹಿಣಿ ಎಂದು ಹೆಮ್ಮೆಯಿಂದ ಹೇಳುವ ಕಾಲ ಮುಗದೇ ಹೋಯಿತು!

ಕೈ ತುಂಬಾ ಬಳೆ, ಕುಂಕುಮ, ಕರಿಮಣಿಯ ದೊಡ್ಡ ಮಾಂಗಲ್ಯ, ಕಾಲುಂಗುರ, ಕಾಲುಚೈನು ಹಾಕಿಕೊಂಡು ದಿನ ನಿತ್ಯ ಮನೆಯಲ್ಲಿ ಓಡಾಡುವ ಗೃಹಿಣಿಯ ಕಾಲ ಈಗಲೇ ಮುಕ್ಕಾಲು ಮುಗಿದಿದೆ ಒಂದಿಷ್ಟು ಮಧ್ಯಮ ವಯಸ್ಕರು ಉಳಿದಿದ್ದಾರೆ ಅವರೂ ಇಲ್ಲವಾದ ಮೇಲೆ ಮುಗೀತು ಅಷ್ಟೇ ಗೋವಿಂದಾ, ಗೋವಿಂದ!

ಹೆಣ್ಣು ಪೂಜೆ, ಪುನಸ್ಕಾರ ಮಾಡಿಕೊಂಡು ಗಂಡ ಮಕ್ಕಳ ಕ್ಷೇಮ ಬಯಸುತ್ತಾ, ಎಲ್ಲರಿಗೂ ಊಟದ ಡಬ್ಬಿ ಕಟ್ಟಿ ಪ್ರೀತಿಯಿಂದ ಬಾಗಿಲು ಬಳಿ ಟಾಟಾ ಹೇಳುತ್ತಾ ನಿಲ್ಲುವ ಹೆಣ್ಣು ಇನ್ನು ಮೇಲೆ ಮರೆಯಾದಳು!

ಈಗ ಏನಿದ್ದರೂ ನಾನು ಕೂಡ ಅಷ್ಟೇ ದುಡಿಯುವುದು, ಎಲ್ಲರೂ ಮನೆಯ ಕೆಲಸ ಹಂಚಿಕೊಳ್ಳಿ ಇಲ್ಲ ಅಡುಗೆಯವರನ್ನು ಇಡಿ ಎಂದು ಗಟ್ಟಿಸಿ ಹೇಳುವ, ಇಲ್ಲ ಹೋಟೆಲ್ ಊಟ ತಿನ್ನಿ ಅಷ್ಟೇ ಎನ್ನುವ ಕಾಲ ಬಂದಾಗಿದೆ!

ಹೆಂಡತಿಗೆ ಕಣ್ಣಲ್ಲೇ ಗದರಿಸುವ ಗಂಡಸರ ಆಳ್ವಿಕೆ, ಮಾತಿಗೊಮ್ಮೆ ಹೋಗಮ್ಮಾ ನಿನಗೇನು ತಿಳಿಯುವುದಿಲ್ಲ ಅನ್ನುವ ಮಕ್ಕಳ ಉಡಾಫೆಯ ಮಾತು ಇನ್ನು ಮುಂದೆ ಇರುವುದಿಲ್ಲ!

ಮೊದಲೆಲ್ಲಾ ಹೆಣ್ಣು ಎಷ್ಟೇ ಓದಿದರೂ ತ್ಯಾಗ ಮಾಡಿ ಪತ್ನಿ ಹಾಗು ವಾತ್ಸಲ್ಯಮಯಿ ತಾಯಿಯ ಪಾತ್ರ ನಿಭಾಯಿಸುತ್ತಾ, ತಾನು ಓದಿದ್ದು ಏನೆಂದು ಮರೆತು ಬಿಡುತ್ತಿದ್ದಳು, ಇನ್ನು ಮುಂದೆ ಆ ರೀತಿಯ ಸೀನ್ ಸಿನಿಮಾದಲ್ಲೂ ಸಿಗುವುದಿಲ್ಲ ಬಿಡಿ!

ಜಗತ್ತು ಬೆಳೆದಂತೆ ಹೆಣ್ಣು ಬದಲಾಗುತ್ತಿದ್ದಾಳೆ, ಆದರೆ ಆಕೆ ಎಷ್ಟೇ ಮುಂದುವರಿದರೂ ಕೆಟ್ಟ ಗಂಡಸರ ಅಸಹ್ಯ ದೃಷ್ಟಿಯಿಂದ ಪಾರಾಗಲು ಸಾಧ್ಯವಾಗಿಲ್ಲ ಎನ್ನುವುದೇ ವಿಪರ್ಯಾಸದ ಸಂಗತಿ!

ಹತ್ತು ಗಂಟೆಯ ಮೇಲೆ ಹೆಣ್ಣು ಹೊರಗೆ ತಿರುಗುವುದು ಈಗಲೂ, ಈ ಕಾಲದಲ್ಲೂ ಅಪಾಯಕಾರಿ ಎನ್ನುವ ಪರಿಸ್ಥಿತಿ ಮಾತ್ರ ಹಾಗೆಯೇ ಇದೆ! ಹೆಣ್ಣು ಪಡೆದ ತಾಯಿಂದರಿಗೆ ಈ ಆತಂಕ ಮಾತ್ರ ತಪ್ಪಿದ್ದಲ್ಲ, ಆದರೆ ಮಕ್ಕಳಿಗೆ ಆ ತಾಯಿಯ ಆತಂಕ ಅರ್ಥ ಆಗುವುದಿಲ್ಲ!

ಆದರೂ ಹೆಣ್ಣು ಧೈರ್ಯದಿಂದ ಮುಂದುವರೆಯಲು ಪ್ರಯತ್ನಿಸುತ್ತಲೇ ಇದ್ದಾಳೆ ಸಂತೋಷದ ವಿಷಯ.

ಆದರೆ ಅವಳು ತನ್ನ ಉಡುಗೆ, ತೊಡುಗೆಯಲ್ಲಿ ಮಾತ್ರ ಅತಿರೇಕದ ಮಟ್ಟಕ್ಕೆ ಹೋಗಿದ್ದಾಳೆ ಎನ್ನುವುದು ಅಷ್ಟೇ ಸತ್ಯ!

ಮಾವ ಅಥವಾ ಹೆತ್ತ ತಂದೆ ಕೂಡ ಹೆಣ್ಣು ಮಕ್ಕಳ ಎದುರಿಗೆ ಕೂತು ಮಾತನಾಡಲು ಮುಜುಗರಪಡುವ ಪರಿಸ್ಥಿತಿ ಬಂದಿದೆ!

ಅಂದ ಮೇಲೆ ಹೊರಗಿನ ವಾತಾವರಣದಲ್ಲಿ ಅದರಿಂದ ಕೂಡ ಹೆಣ್ಣಿಗೆ ಅಪಾಯ ಹೆಚ್ಚಾಗಿದೆ

ಅಂದರೆ ಮುಖ್ಯವಾಗಿ ಒಂದು ಅಂಶ ನಾವು ಅರಿವಿನಲ್ಲಿ ಇಟ್ಟುಕೊಳ್ಳಬೇಕು ಜೀವನ ಎಷ್ಟೇ ಆಧುನಿಕಗೊಳ್ಳಲಿ ಒಳ್ಳೆಯವರು ಹುಟ್ಟಿದಂತೆ ಇಂಥ ದುರಳರೂ ನಿರಂತರವಾಗಿ ಹುಟ್ಟುತ್ತಲೇ ಇರುತ್ತಾರೆ! ಅವರಿಗೆ ಪ್ರೋತ್ಸಾಹ ಕೊಡುವಂತೆ ಹೆಣ್ಣು ಕೂಡಾ ಇತ್ತೀಚೆಗೆ ಅತಿರೇಕವಾಗಿ ವರ್ತಿಸುತ್ತಿದ್ದಾಳೆ!

ಅದನ್ನೆಲ್ಲಾ ಬಿಡಿಸಿ ಹೇಳಲು ಕೂಡ ಮುಜುಗರ, ಹೀಗಾಗಿ ಇದರಲ್ಲಿ ಹೆಣ್ಣಿನ ತಪ್ಪು ಬೇಕಾದಷ್ಟು ಇದೆ, ಹೇಳಿದರೆ ನಾನೇ ಹೆಣ್ಣಾಗಿ ಹೆಣ್ಣಿನ ಮೇಲೆ ಅಪವಾದ ಕಟ್ಟಿದಂತಹ ಅಪರಾಧಿ ಮನೋಭಾವ!

ಹೀಗಾಗಿ ಹೆಣ್ಣು ಮಕ್ಕಳ ತಂದೆ, ತಾಯಂದಿರನ್ನು ಒಂದು ಮಾತು ಕೇಳಿ, ಅವರ ಮಕ್ಕಳು ಕತ್ತಲಾದ ಮೇಲೆ ಹೊರಗೆ ಹೋದರೆ ಅವರು ಬರುವ ತನಕ ಹತ್ತು ಸಲವಾದರೂ, ಫೋನ್ ಮಾಡಿ ತಮ್ಮೆಲ್ಲಾ ದೃಷ್ಟಿ ಬಾಗಿಲು ಕಡೆಗೆ ನೆಟ್ಟಿರುತ್ತಾರೆ!

ಇದನ್ನು ಈಗೀನ ಮಕ್ಕಳು ತಿಳಿದುಕೊಳ್ಳದೆ ಇರುವುದೇ ತಂದೆ,ತಾಯಿಯರಿಗೆ ಸಮಸ್ಯೆಯಾಗಿದೆ, ಆದರೆ ಅವರು ಅಸಹಾಯಕರೇ ಸರಿ, ಏಕೆಂದರೆ ಮಕ್ಕಳು ಬೆಳೆದು ಅವರದೇ ಆದ ಸ್ವಂತ ವ್ಯಕ್ತಿತ್ವ ಪ್ರಾರಂಭವಾದರೆ ಯಾರ ಮಾತು ಕೇಳುವ ಮನಸ್ಥಿತಿಯಲ್ಲಿ ಅವರು ಇರುವುದಿಲ್ಲ !

ಹೀಗಾಗಿ ಮಧ್ಯೆ ವಯಸ್ಸಿನ ಗೃಹಣಿಯರು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಆಗಿದ್ದಾರೆ, ಈ ಕಡೆಗೆ ಹಳೆಯ ಕಾಲದವರಂತೆ ಇರಲು ಆಗುವುದಿಲ್ಲ ಹಾಗಂತ ಆಧುನಿಕ ಜಗತ್ತಿನ ಅತಿರೇಕಕ್ಕೆ ಹೊಂದಿಕೊಳ್ಳಲೂ ಸಾಧ್ಯವಾಗದೇ ಮಧ್ಯೆದಲ್ಲಿ ಸಿಕ್ಕಿಹಾಕಿಕೊಂಡ ಪರಿಸ್ಥಿತಿ ಅವರದು!

ಅದಕ್ಕೆ ಹೇಳುತ್ತಿರುವುದು ಈ ಕಲಿಯುಗದಲ್ಲಿ ಮಧ್ಯೆ ವಯಸ್ಕರ ಅಂತ್ಯ, ಗೃಹಿಣಿ ಎನ್ನುವ ಪಟ್ಟದ ಅಂತ್ಯವೆಂದು !

ಸಂಸ್ಕಾರವಂತರ ಕಾಲ ಮುಗಿದು ವಿದ್ಯಾವಂತರ ಯುಗ ಪ್ರಾರಂಭ!

---



ಉಮೇಶ ಸರ್ಪನಕಟ್ಟೆ




# ಬದುಕೆಂದರೆ 'B' ಪಾಸಿಟಿವ್

ಜೀವನವೆಂಬುದು ಸದಾ ನಮ್ಮ ಇಚ್ಛೆಯಂತೆ ಸಾಗುವ ಪಯಣವಲ್ಲ. ಕೆಲವೊಮ್ಮೆ ಸಂತೋಷದ ಕ್ಷಣಗಳು ಎದುರಾದರೆ, ಮತ್ತೊಮ್ಮೆ ನೋವು, ನಿರಾಸೆ, ಸೋಲು ಮತ್ತು ಸವಾಲುಗಳು ನಮ್ಮನ್ನು ಪರೀಕ್ಷಿಸುತ್ತವೆ. ಆದರೆ ಬದುಕಿನ ನಿಜವಾದ ಅರ್ಥ ಇರುವುದು ಈ ಎಲ್ಲ ಸಂದರ್ಭಗಳಲ್ಲಿಯೂ ಧನಾತ್ಮಕ ಮನೋಭಾವವನ್ನು ಉಳಿಸಿಕೊಳ್ಳುವುದರಲ್ಲಿ. ಅದಕ್ಕಾಗಿಯೇ "ಬದುಕೆಂದರೆ ঃ ಕಥುಣುತಜ" ಎಂಬ ಮಾತು ಕೇವಲ ಒಂದು ಪದವಲ್ಲ, ಅದು ಬದುಕನ್ನು ನೋಡುವ ಒಂದು ದೃಷ್ಟಿಕೋನವಾಗಿದೆ.

**ನೋವುಗಳು ಸಾಮಾನ್ಯ:** ಈ ಜಗತ್ತಿನಲ್ಲಿ ನೋವನ್ನು ಅನುಭವಿಸದ ವ್ಯಕ್ತಿ ಯಾರೂ ಇಲ್ಲ. ಪ್ರತಿಯೊಬ್ಬರ ಜೀವನದಲ್ಲೂ ಒಂದಲ್ಲ ಒಂದು ರೀತಿಯ ಸಂಕಷ್ಟ, ನಷ್ಟ ಅಥವಾ ನಿರಾಸೆ ಇರುತ್ತದೆ. ಕೆಲವರು ಅದನ್ನು ಹೊರಗೆ ತೋರಿಸುತ್ತಾರೆ, ಇನ್ನೂ ಕೆಲವರು ಮೌನವಾಗಿ ಸಹಿಸಿಕೊಳ್ಳುತ್ತಾರೆ. ಆದರೆ ನೋವು ಬಂದಾಗ ಜೀವನವೇ ಮುಗಿದುಹೋಯಿತು ಎಂದು ಭಾವಿಸುವ ಬದಲು, ಅದು ನಮ್ಮನ್ನು ಇನ್ನಷ್ಟು ಪ್ರಬುದ್ಧರನ್ನಾಗಿ ಮಾಡುವ ಅನುಭವ ಎಂದು ಅರ್ಥಮಾಡಿಕೊಳ್ಳಬೇಕು. ನೋವುಗಳು ನಮ್ಮನ್ನು ಕುಗ್ಗಿಸಲು ಬರುವುದಿಲ್ಲ, ಬದುಕಿನ ಮೌಲ್ಯವನ್ನು ತಿಳಿಸಲು ಬರುತ್ತವೆ.

**ಸೋಲಿನಲ್ಲಿ ಗೆಲುವನ್ನು ಕಾಣುವುದು:** ಸೋಲು ಎಂದರೆ ಅಂತ್ಯವಲ್ಲ. ಅದು ಯಶಸ್ಸಿನ ದಾರಿಯಲ್ಲಿರುವ ಒಂದು ಪಾಠ ಮಾತ್ರ. ಇತಿಹಾಸದಲ್ಲಿ ದೊಡ್ಡ ಸಾಧನೆ ಮಾಡಿದ ಅನೇಕರು ಹಲವಾರು ಬಾರಿ ಸೋತಿದ್ದಾರೆ. ಆದರೆ ಅವರು ಸೋಲನ್ನು ತಮ್ಮ ದೌರ್ಬಲ್ಯವನ್ನಾಗಿ ಮಾಡಿಕೊಳ್ಳದೆ, ಮುಂದಿನ ಗೆಲುವಿನ ಮೆಟ್ಟಿಲಾಗಿ ಬಳಸಿಕೊಂಡರು. ಜೀವನದಲ್ಲಿ ಒಂದು ಅವಕಾಶ ಕೈತಪ್ಪಿದರೆ ಮತ್ತೊಂದು ಅವಕಾಶಕ್ಕಾಗಿ ಸಿದ್ಧರಾಗಬೇಕು. ಸೋಲಿನಲ್ಲಿಯೂ ಗೆಲುವಿನ ಸಾಧ್ಯತೆಯನ್ನು ಕಾಣುವ ದೃಷ್ಟಿಯೇ ವ್ಯಕ್ತಿಯನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ.

ಎದುರಾಗುವ ಸಮಸ್ಯೆಗಳನ್ನು ಮೀರಿ ಮುನ್ನಡೆಯುವುದು

ಸಮಸ್ಯೆಗಳಿಲ್ಲದ ಜೀವನವನ್ನು ಯಾರೂ ಕಂಡಿಲ್ಲ. ಕುಟುಂಬ, ಉದ್ಯೋಗ, ಶಿಕ್ಷಣ, ಆರೋಗ್ಯ ಅಥವಾ ಸಂಬಂಧಗಳು?ಯಾವ ಕ್ಷೇತ್ರದಲ್ಲಾದರೂ ಸವಾಲುಗಳು ಎದುರಾಗುತ್ತವೆ. ಆದರೆ ಸಮಸ್ಯೆಗಳಿಂದ ಓಡಿಹೋಗುವುದು ಪರಿಹಾರವಲ್ಲ. ಅವುಗಳನ್ನು ಧೈರ್ಯದಿಂದ ಎದುರಿಸಿ, ಪರಿಹಾರದ ಮಾರ್ಗವನ್ನು ಹುಡುಕುವುದು ಮುಖ್ಯ. ಪ್ರತಿಯೊಂದು ಸಮಸ್ಯೆಯೂ ನಮ್ಮೊಳಗಿನ ಸಾಮರ್ಥ್ಯವನ್ನು ಹೊರತರುವ ಒಂದು ಅವಕಾಶವಾಗಿದೆ. ಸಮಸ್ಯೆಗಳನ್ನು ಮೀರಿ ಮುಂದೆ ಸಾಗುವ ಮನೋಬಲವೇ ವ್ಯಕ್ತಿಯ ನಿಜವಾದ ಶಕ್ತಿಯಾಗಿದೆ.

ಕಾಲೆಳೆಯುವವರ ನಡುವೆ ಬೆಳೆದು ನಿಲ್ಲುವುದು

ನಾವು ಬೆಳೆಯಲು ಆರಂಭಿಸಿದಾಗ ನಮ್ಮನ್ನು ಪ್ರೋತ್ಸಾಹಿಸುವವರಿಗಿಂತ ಟೀಕಿಸುವವರು ಹೆಚ್ಚು ಸಿಗಬಹುದು. ಕೆಲವರು ನಮ್ಮ ಪ್ರಯತ್ನಗಳನ್ನು ಹಾಸ್ಯ ಮಾಡಬಹುದು, ಕೆಲವರು ನಮ್ಮ ಪ್ರಗತಿಯನ್ನು ಸಹಿಸದೆ ಕಾಲೆಳೆಯಬಹುದು. ಆದರೆ ಅವರ ಮಾತುಗಳಿಗೆ ತಲೆಕೆಡಿಸಿಕೊಳ್ಳದೆ ನಮ್ಮ ಗುರಿಯತ್ತ ಸಾಗಿದಾಗ ಮಾತ್ರ ಯಶಸ್ಸು ಸಿಗುತ್ತದೆ. ಮರ ಎತ್ತರಕ್ಕೆ ಬೆಳೆದಂತೆ ಗಾಳಿಯ ಹೊಡೆತವೂ ಹೆಚ್ಚಾಗುತ್ತದೆ. ಅದೇ ರೀತಿ ವ್ಯಕ್ತಿ ಬೆಳೆಯುತ್ತಿದ್ದಂತೆ ವಿರೋಧಗಳೂ ಹೆಚ್ಚಾಗುತ್ತವೆ. ಆದರೂ ತನ್ನ ಮೌಲ್ಯಗಳನ್ನು ಉಳಿಸಿಕೊಂಡು, ತನ್ನ ಗುರಿಯನ್ನು ಮರೆಯದೆ ಮುನ್ನಡೆಯುವವನೇ ನಿಜವಾದ ವಿಜೇತ.

**ಕಷ್ಟದ ಸಮಯದಲ್ಲೂ ಒಳಿತನ್ನು ಹುಡುಕೋಣ**

ಬದುಕಿನ ಅತ್ಯಂತ ಕಠಿಣ ಕ್ಷಣಗಳಲ್ಲಿಯೂ ಒಂದಲ್ಲ ಒಂದು ಒಳ್ಳೆಯ ಅಂಶ ಅಡಗಿರುತ್ತದೆ. ಕೆಲವೊಮ್ಮೆ ಕಷ್ಟಗಳು ನಮಗೆ ಹೊಸ ಪಾಠ ಕಲಿಸುತ್ತವೆ, ಕೆಲವೊಮ್ಮೆ ನಿಜವಾದ ಸಂಬಂಧಗಳನ್ನು ಪರಿಚಯಿಸುತ್ತವೆ, ಇನ್ನೊಮ್ಮೆ ನಮ್ಮೊಳಗಿನ ಧೈರ್ಯವನ್ನು ಹೊರತರುತ್ತವೆ. ಕತ್ತಲೆಯ ರಾತ್ರಿ ಎಷ್ಟು ದೀರ್ಘವಾಗಿದ್ದರೂ ಕೊನೆಯಲ್ಲಿ ಬೆಳಗು ಬಂದೇ ಬರುತ್ತದೆ. ಆದ್ದರಿಂದ ಸಂಕಷ್ಟದ ಸಮಯದಲ್ಲಿ ನಿರಾಶೆಗೆ ಒಳಗಾಗದೆ, ಅದರಲ್ಲಿ ಅಡಗಿರುವ ಪಾಠ ಮತ್ತು ಒಳಿತನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು.

ಬದುಕು ಎಂದರೆ ಕೇವಲ ಸಂತೋಷದ ಕ್ಷಣಗಳ ಸಂಗ್ರಹವಲ್ಲ; ಅದು ನೋವು, ಸೋಲು, ಸವಾಲು ಮತ್ತು ಹೋರಾಟಗಳ ನಡುವೆ ಆಶಾವಾದದಿಂದ ಸಾಗುವ ಪಯಣವಾಗಿದೆ. ನೋವುಗಳು ಸಾಮಾನ್ಯ ಎಂಬುದನ್ನು ಒಪ್ಪಿಕೊಂಡು, ಸೋಲಿನಲ್ಲಿ ಗೆಲುವನ್ನು ಕಂಡು, ಎದುರಾಗುವ ಸಮಸ್ಯೆಗಳನ್ನು ಮೀರಿ, ಕಾಲೆಳೆಯುವವರ ನಡುವೆ ಬೆಳೆದು ನಿಂತು, ಕಷ್ಟದ ಸಮಯದಲ್ಲೂ ಒಳಿತನ್ನು ಹುಡುಕುವ ಮನೋಭಾವವೇ "B Positive" ಬದುಕಿನ ಸಾರವಾಗಿದೆ.

ಆದ್ದರಿಂದ ಜೀವನ ಎಷ್ಟೇ ಕಠಿಣವಾಗಿದ್ದರೂ ಆಶೆಯನ್ನು ಕಳೆದುಕೊಳ್ಳಬೇಡಿ. ಪರಿಸ್ಥಿತಿಗಳು ಬದಲಾಗುತ್ತವೆ, ಸಮಯ ಬದಲಾಗುತ್ತದೆ, ಕಷ್ಟಗಳೂ ಕಳೆಯುತ್ತವೆ. ಆದರೆ ಧನಾತ್ಮಕ ಚಿಂತನೆ ಮತ್ತು ಧೈರ್ಯ ಮಾತ್ರ ನಮ್ಮನ್ನು ಕೊನೆಯವರೆಗೂ ಗೆಲ್ಲಿಸುತ್ತವೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,